**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ**

**16 ಸಿ – 1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,**

**ಬೆಂಗಳೂರು – 560 052**

**ಪತ್ರಿಕಾ ಪ್ರಕಟಣೆ**

**2021-22ನೇ ಸಾಲಿನ ವಿದ್ಯುಚ್ಛಕ್ತಿ ದರ ಪರಿಷ್ಕರಣೆ**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ವ್ಯಾಪ್ತಿಯ ಗ್ರಾಹಕರಿಗೆ ಅನ್ವಯವಾಗುವಂತೆ ಆರ್ಥಿಕ ವರ್ಷ 2021-22 ರ ಸಾಲಿಗೆ ವಿದ್ಯುಚ್ಛಕ್ತಿ ಪೂರೈಕೆ ದರಗಳ ಪರಿಷ್ಕರಣೆಯನ್ನು ಅನುಮೋದಿಸಿದೆ. ಆಯೋಗವು 2021-22ನೇ ಆರ್ಥಿಕ ವರ್ಷದಲ್ಲಿ ಪ್ರತಿ ಯೂನಿಟ್ ಗೆ ಸರಾಸರಿ 30 (ಮೂವತ್ತು) ಪೈಸೆಗಳಷ್ಟು (ನಿಗದಿತ / ಬೇಡಿಕೆ ಮತ್ತು ಇಂಧನ ಶುಲ್ಕಗಳ ಹೆಚ್ಚಳವನ್ನು ಪರಿಗಣಿಸಿ) ದರಹೆಚ್ಚಳಕ್ಕೆ ಅನುಮೋದನೆ ನೀಡಿದೆ. ಇದರ ಪರಿಣಾಮವಾಗಿ ಚಿಲ್ಲರೆ ವಿದ್ಯುಚ್ಛಕ್ತಿ ಸರಬರಾಜು ದರದಲ್ಲಿ ಸರಾಸರಿ 3.84% ಹೆಚ್ಚಳವಾಗಿದೆ. ವಿದ್ಯುತ್ ಸರಬರಾಜು ಕಂಪನಿಗಳು ಸರಾಸರಿ ಶೇ.17.31ರ ದರದಲ್ಲಿ ಪ್ರತಿ ಯೂನಿಟ್ ಗೆ ಸರಾಸರಿ 135 ಪೈಸೆ ಹೆಚ್ಚಳವನ್ನು ಕೋರಿರುತ್ತವೆ.

ಆಯೋಗವು ಮಂಗಳೂರು ವಿಶೇಷ ಆರ್ಥಿಕ ವಲಯ (MSEZ) ಮಂಗಳೂರು ಮತ್ತು ಬೆಳಗಾವಿ ಜಿಲ್ಲೆಯ ಏಕಸ್ ವಿಶೇಷ ಆರ್ಥಿಕ ವಲಯದ (AEQUS SEZ) ಗ್ರಾಹಕರಿಗೆ ಅನ್ವಯವಾಗುವ ಪರಿಷ್ಕೃತ ಚಿಲ್ಲರೆ ವಿದ್ಯುಚ್ಛಕ್ತಿ ಪೂರೈಕೆ ದರವನ್ನು ಸಹ ನಿರ್ಧರಿಸಿದೆ.

ಪರಿಷ್ಕೃತ ಚಿಲ್ಲರೆ ವಿದ್ಯುಚ್ಛಕ್ತಿ ಪೂರೈಕೆ ದರವು, 2021-22ರ ಆರ್ಥಿಕ ವರ್ಷದಲ್ಲಿ ಕೆಪಿಟಿಸಿಎಲ್ (KPTCL) ಗೆ ವಿದ್ಯುತ್ ಸರಬರಾಜು ಕಂಪನಿಗಳು ಪಾವತಿಸಬೇಕಾದ ಪರಿಷ್ಕೃತ ಪ್ರಸರಣ ದರವನ್ನೂ ಒಳಗೊಂಡಿದೆ.

**ಪರಿಣಾಮಕಾರಿ (Effective) ದಿನಾಂಕ:**

ಈ ಪರಿಷ್ಕೃತ ದರಗಳು 2021 ರ ಏಪ್ರಿಲ್ 1 ರಂದು ಅಥವಾ ಅದರ ನಂತರದ ಮೊದಲ ಮೀಟರ್ ಓದುವ ದಿನಾಂಕದಿಂದ ಬಳಕೆ ಮಾಡುವ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತವೆ.

ಪ್ರಸ್ತುತ ದರ ಆದೇಶದ ಪ್ರಕಾರ, ಆಯೋಗವು ನಿರ್ಧರಿಸಿದ ಆದಾಯದ ಕೊರತೆಯನ್ನು ವಸೂಲಿ ಮಾಡಲು, ಪರಿಷ್ಕೃತ ದರವನ್ನು 2021 ರ ಏಪ್ರಿಲ್ 1 ರಂದು ಅಥವಾ ಅದರ ನಂತರದ ಮೊದಲ ಮೀಟರ್ ಓದುವ ದಿನಾಂಕದಿಂದ ಬಳಸಲಾಗುವ ವಿದ್ಯುಚ್ಛಕ್ತಿಗೆ ಅನ್ವಯವಾಗುವಂತೆ ಜಾರಿಗೆ ತರಲು ಆಯೋಗವು ನಿರ್ಧರಿಸುತ್ತದೆ. ಆದಾಗ್ಯೂ, ದರ ಹೆಚ್ಚಳದಿಂದಾಗಿ ಗ್ರಾಹಕರ ಮೇಲಿನ ಹೊರೆಯನ್ನು ಮೃದುಗೊಳಿಸಲು, ರಾಜ್ಯದಲ್ಲಿ ಕೋವಿಡ್ - 19 ಸಾಂಕ್ರಾಮಿಕ ರೋಗದಿಂದಾಗಿ ಚಾಲ್ತಿಯಲ್ಲಿರುವ

ಲಾಕ್‌ಡೌನ್ ಪರಿಸ್ಥಿತಿಯಲ್ಲಿ, ಏಪ್ರಿಲ್ 2021 ಮತ್ತು ಮೇ, 2021 ರ ತಿಂಗಳ ದರ ಪರಿಷ್ಕರಣೆಯ ಬಾಕಿಯನ್ನು, ಯಾವುದೇ ಬಡ್ಡಿಯನ್ನು ವಿಧಿಸದೆ ಅಕ್ಟೋಬರ್ 2021 ಮತ್ತು ನವೆಂಬರ್, 2021 ರ ತಿಂಗಳಲ್ಲಿ ಕ್ರಮವಾಗಿ ವಸೂಲಿ ಮಾಡಲು ಆದೇಶಿಸಲಾಗಿದೆ.

**ದರ ಆದೇಶವನ್ನು ಪ್ರಕಟಿಸಲು ಆದ ವಿಳಂಬಕ್ಕೆ ಕಾರಣಗಳು:**

ಈ ಕೆಳಗಿನ ಕಾರಣಗಳಿಂದಾಗಿ 2021 ರ ದರ ಆದೇಶ ಪ್ರಕಟಣೆಯು ವಿಳಂಬವಾಗಿರುತ್ತದೆ:

- ಭಾರತೀಯ ಚುನಾವಣಾ ಆಯೋಗದ ಅಧಿಸೂಚನೆ ಸಂಖ್ಯೆ ECI/PN/28/2021 ದಿನಾಂಕ 23ನೇ ಮಾರ್ಚ್ 2021 ರ ಮೂಲಕ ಮಸ್ಕಿ ಮತ್ತು ಬಸವಕಲ್ಯಾಣದ ಎರಡು (2) ರಾಜ್ಯ ವಿಧಾನಸಭಾ ಕ್ಷೇತ್ರಗಳು ಮತ್ತು ಬೆಳಗಾವಿಯ ಒಂದು (1) ಲೋಕಸಭಾ ಕ್ಷೇತ್ರಕ್ಕೆ ಚುನಾವಣೆಯ ಘೋಷಣೆಯಿಂದಾಗಿ ರಾಜ್ಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಾದುದರಿಂದ.
- ರಾಜ್ಯ ಚುನಾವಣಾ ಆಯೋಗವು 2021ರ ಮಾರ್ಚ್ 21 ರ ಅಧಿಸೂಚನೆಯ ಮೂಲಕ, 2021 ರ ಏಪ್ರಿಲ್ 27 ರಂದು ಕರ್ನಾಟಕದ ನಗರ ಸಭೆಗಳು, ಮುನ್ಸಿಪಲ್ ಕೌನ್ಸಿಲ್‌ಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಘೋಷಿಸಿದ್ದರಿಂದ, ರಾಜ್ಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಾದುದರಿಂದ.
- ಕೋವಿಡ್ - 19 ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುವುದನ್ನು ತಡೆಯಲು ಕರ್ನಾಟಕ ಸರ್ಕಾರವು 2021 ರ ಏಪ್ರಿಲ್ 26 ರ ಅಧಿಸೂಚನೆ ಸಂಖ್ಯೆ RD 158 TNR 2020, 2021 ರ ಮೇ 7 ರ ಅಧಿಸೂಚನೆ ಸಂಖ್ಯೆ RD 158 TNR 2020ರ ಮತ್ತು 2021 ರ ಮೇ 21 ರ ಅಧಿಸೂಚನೆ ಸಂಖ್ಯೆ RD 158 TNR 2020ರ ಮೂಲಕ ಮಾರ್ಗಸೂಚಿಗಳನ್ನು ಬಿಡುಗಡೆಗೊಳಿಸಿ, 07.06.2021 ರವರೆಗೆ ಇಡೀ ರಾಜ್ಯದಲ್ಲಿ ಕೆಲವು ಕಚೇರಿಗಳು / ಚಟುವಟಿಕೆಗಳನ್ನು ನಿಷೇಧಿಸಿ ಆದೇಶಿಸಿದ್ದರಿಂದ ಆಯೋಗದ ದಿನನಿತ್ಯದ ಕೆಲಸಗಳಲ್ಲಿ ಉಂಟಾದ ಏರುಪೇರು.

**ವಿದ್ಯುಚ್ಛಕ್ತಿ ದರ ಏರಿಕೆಗೆ ಕಾರಣಗಳು:**

ಚಿಲ್ಲರೆ ವಿದ್ಯುತ್ ಪೂರೈಕೆ ದರ ಹೆಚ್ಚಳಕ್ಕೆ ಅನಿವಾರ್ಯ ಕಾರಣಗಳೆಂದರೆ,

- ಮಾನ್ಯ ವಿದ್ಯುಚ್ಛಕ್ತಿ ಮೇಲ್ಮನವಿ ನ್ಯಾಯಾಧಿಕರಣದ (ಎಟಿಇ) ದಿನಾಂಕ 05.10.2020 ರ ಆದೇಶದ ಪ್ರಕಾರ ರಚಿಸಲಾದ ನಿಯಂತ್ರಕ ಸ್ವತ್ತು (Regulatory Asset - RA) ಮರುಪಡೆಯುವಿಕೆಯಿಂದಾಗಿ ದರದಲ್ಲಿ ಹೆಚ್ಚಳ (ಪ್ರತಿ ಯೂನಿಟ್‌ಗೆ 5.46 ಪೈಸೆ),
- ಕೋವಿಡ್ -19 ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ಆರ್ಥಿಕತೆಯ ಎಲ್ಲಾ ಕ್ಷೇತ್ರಗಳಲ್ಲೂ ಚಾಲ್ತಿಯಲ್ಲಿರುವ ಪ್ರತಿಕೂಲ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಆರ್ಥಿಕ ವರ್ಷ 2021 ರ ದರ ಪರಿಷ್ಕರಣೆ ಆದೇಶ ನೀಡುವಲ್ಲಿ ಆದ ವಿಳಂಬದ ಕಾರಣ ಆಯೋಗವು ತನ್ನ 04.11.2020 ರ ಆದೇಶದಲ್ಲಿ ರಚಿಸಲಾದ ನಿಯಂತ್ರಕ ಸ್ವತ್ತು (Regulatory Asset - RA) ಮರುಪಡೆಯುವಿಕೆಯಿಂದಾಗಿ ದರದಲ್ಲಿ ಹೆಚ್ಚಳ (ಪ್ರತಿ ಯೂನಿಟ್‌ಗೆ 11.89 ಪೈಸೆ),

- ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳ ಕಾರ್ಯಾಚರಣೆಯ ವೆಚ್ಚದಲ್ಲಿನ ಒಟ್ಟಾರೆ ಹೆಚ್ಚಳಕ್ಕೆ ಸಂಬಂಧಿಸಿದಂತೆ ಉಳಿದ ಹೆಚ್ಚಳ (ಪ್ರತಿ ಯೂನಿಟ್‌ಗೆ 12.64 ಪೈಸೆ). ಇದರಲ್ಲಿ ಆರ್ಥಿಕ ವರ್ಷ 2020ರ ವಾರ್ಷಿಕ ಆರ್ಥಿಕ ಪುನರ್ಮನನದ ಪ್ರಕಾರ ಅನುಮೋದಿತ ಆದಾಯ ಕೊರತೆಯೂ ಸೇರಿದಂತೆ, ಪ್ರಸಕ್ತ ಬೇಡಿಕೆಯನ್ನು ಪೂರೈಸಲು ಹೊಸ ಶಾಖೋತ್ಪನ್ನ ಕೇಂದ್ರಗಳಿಂದ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿಯ ವೆಚ್ಚದಲ್ಲಿ ಆಗಿರುವ ಹೆಚ್ಚಳವೂ ಸೇರಿದೆ.
- ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿರುವ ಕಾರ್ಯ ಮತ್ತು ನಿರ್ವಹಣೆ ವೆಚ್ಚ ಮತ್ತು ಬಂಡವಾಳ ಕಾಮಗಾರಿಗಳ ವೆಚ್ಚಕ್ಕಾಗಿ ಪಡೆಯುವ ಸಾಲಗಳು.
- ಸಮಾಜದ ಮೂಲಭೂತ ಅಗತ್ಯವಾಗಿರುವ ವಿದ್ಯುತ್ ಪೂರೈಕೆಯನ್ನು ವಿದ್ಯುತ್ ಸರಬರಾಜು ಕಂಪನಿಗಳು ಸುಲಲಿತವಾಗಿ ನಡೆಸಲು ಅನುವು ಮಾಡಿಕೊಡುವ ಸಲುವಾಗಿ, ವಿದ್ಯುತ್ ಪೂರೈಕೆ ದರದ ಹೆಚ್ಚಳ ಅನಿವಾರ್ಯವಾಗಿದೆ.

**ನಿಯಂತ್ರಕ ಸ್ವತ್ತನ್ನು (ಆರ್ ಎ) ರಚಿಸಲು ಕಾರಣಗಳು:**

a) 05.10.2020 ರ ಎ.ಟಿ.ಇ (ATE) ಆದೇಶದಂತೆ, ಆ.ವ 2021 ರಿಂದ ಆ.ವ 2025 ರವರೆಗೆ ಮತ್ತು ಆ.ವ 2026ರ ವರೆಗಿನ ಐದು ವರ್ಷಗಳ ಅವಧಿಯಲ್ಲಿ, ತಣ್ಣೀರ್ ಬಾವಿಯ ಹಕ್ಕನ್ನು, ಬಡ್ಡಿಯ ವೆಚ್ಚದೊಂದಿಗೆ (carrying cost), ಕ.ವಿ.ಪ್ರ.ನಿ.ನಿಗೆ ಮರುಸಲ್ಲಿಸುವ ಸಲುವಾಗಿ ರಚಿಸಲಾದ 1,657 ಕೋಟಿ ರೂಪಾಯಿಗಳ ನಿರ್ವಾಹಕ ಸ್ವತ್ತು.

b) ಆಯೋಗವು ಆರ್ಥಿಕ ವರ್ಷ 2021 ರಲ್ಲಿ ಕೋವಿಡ್ -19 ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ಆರ್ಥಿಕತೆಯ ಎಲ್ಲಾ ಕ್ಷೇತ್ರಗಳಲ್ಲೂ ಉಂಟಾಗಿದ್ದ ಪ್ರತಿಕೂಲ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪರಿಷ್ಕೃತ ವಿದ್ಯುತ್ ದರವನ್ನು ಕೇವಲ 5 ತಿಂಗಳಿಗೆ ನಿಗದಿಗೊಳಿಸಿ ಅನುಮೋದನೆ ನೀಡಿ, 2020 ರ ಏಪ್ರಿಲ್ 1 ರಿಂದ 2020 ರ ಅಕ್ಟೋಬರ್ 31 ರವರೆಗೆ ವಿದ್ಯತ್ ದರ ಪರಿಷ್ಕರಣೆಯಿಂದ ಮರುಪಡೆಯಬಹುದಾದ ಹೆಚ್ಚುವರಿ ಆದಾಯವಾದ 1,443 ಕೋಟಿ ರೂಪಾಯಿಗಳನ್ನು ನಿಯಂತ್ರಕ ಸ್ವತ್ತಾಗಿ ಇಡಲು ಅವಕಾಶ ನೀಡಿತ್ತು. ಪ್ರಸಕ್ತ ಕೋವಿಡ್ -19 ಸಾಂಕ್ರಾಮಿಕ ರೋಗದಿಂದಾಗಿ ಚಾಲ್ತಿಯಲ್ಲಿರುವ ಪ್ರತಿಕೂಲ ಆರ್ಥಿಕ ಪರಿಸ್ಥಿತಿಗಳಿಂದಾಗಿ ಗ್ರಾಹಕರಿಗೆ ಹೊರೆಯಾಗದಂತೆ ಖಚಿತಪಡಿಸಿಕೊಂಡು, ಈ ನಿಯಂತ್ರಕ ಸ್ವತ್ತನ್ನು ಆ.ವ 2022 ಮತ್ತು ಆ.ವ 2023 ರ ಅವಧಿಯಲ್ಲಿ ಎರಡು ಸಮಾನ ಕಂತುಗಳಲ್ಲಿ ಗ್ರಾಹಕರಿಂದ ವಸೂಲಿ ಮಾಡಲು 04.11.2020 ರ ದರ ಪರಿಷ್ಕರಣೆ ಆದೇಶದಲ್ಲಿ ಆದೇಶಿಸಲಾಗಿದೆ.

**ಆರ್ಥಿಕ ವರ್ಷ 2022ಕ್ಕೆ ಒಟ್ಟು ಆದಾಯ ಕೊರತೆ:**

ಮೇಲೆ ವಿವರಿಸಿದ ಕಾರಣಗಳಿಂದಾಗಿ ಆರ್ಥಿಕ ವರ್ಷ 2020 ರ ಆದಾಯ ಕೊರತೆ ಸೇರಿ ಆರ್ಥಿಕ ವರ್ಷ 2022ರ ಆದಾಯ ಕೊರತೆ, ಆರ್ಥಿಕ ವರ್ಷ 2020ರ ಅವಧಿಯಲ್ಲಿ ರಚಿಸಲಾದ ನಿಯಂತ್ರಕ ಸ್ವತ್ತುಗಳು ಸೇರಿದಂತೆ, ಆರ್ಥಿಕ ವರ್ಷ 2022ಕ್ಕೆ ಮೌಲ್ಯಮಾಪನ ಮಾಡಲಾದ ಒಟ್ಟು ಆದಾಯದ ಅಂತರವು ರೂ.

1,819.38 ಕೋಟಿಗಳಾಗಿದೆ. ಈ ಆದಾಯದ ಕೊರತೆಯನ್ನು, 1 ನೇ ಏಪ್ರಿಲ್ 2021 ರಿಂದ ಮಾರ್ಚ್ 31, 2022 ರವರೆಗೆ ದರ ಪರಿಷ್ಕರಣೆಯ ಮೂಲಕ ಭರ್ತಿ ಮಾಡಬೇಕಾಗಿದೆ.

**ವಿದ್ಯುತ್ ಸರಬರಾಜು ಕಂಪನಿಗಳ ಪ್ರಸ್ತಾವನೆ:**

ಎಲ್ಲಾ ವರ್ಗದ ಗ್ರಾಹಕರಿಗೆ ಸಂಬಂಧಿಸಿದಂತೆ, ವಿದ್ಯುತ್ ಸರಬರಾಜು ಕಂಪನಿಗಳು ಪ್ರತಿ ಯೂನಿಟ್‌ಗೆ 83 ಪೈಸೆಗಳಿಂದ 168 ಪೈಸೆಗಳವರೆಗೆ ದರ ಹೆಚ್ಚಳವನ್ನು ಕೋರಿರುತ್ತವೆ. ವಿದ್ಯುತ್ ಸರಬರಾಜು ಕಂಪನಿವಾರು ಕೋರಿರುವ ದರ ಏರಿಕೆ ಮತ್ತು ಶೇಕಡಾವಾರು ದರ ಏರಿಕೆಯ ವಿವರ ಈ ಕೆಳಕಂಡಂತೆ ಇರುತ್ತದೆ:

| ವಿದ್ಯುತ್ ಸರಬರಾಜು ಕಂಪನಿ | ಆದಾಯದಲ್ಲಿನ ಯೋಜಿತ ಕೊರತೆ, ಕೋಟಿ ರೂ. | ಯೋಜಿತ ವಿದ್ಯುಚ್ಛಕ್ತಿ ಮಾರಾಟ, ದಶಲಕ್ಷ ಯೂನಿಟ್ | ಪ್ರತಿ ಯೂನಿಟ್‌ಗೆ ಪ್ರಸ್ತಾವಿತ ಏರಿಕೆ, ಪೈಸೆಗಳಲ್ಲಿ | ಯೋಜಿತ ಹಾಲಿ ಆದಾಯ, ಕೋಟಿ ರೂ. | ಶೇಕಡಾ ಏರಿಕೆ |
|---|---|---|---|---|---|
| **ಬೆ.ವಿ.ಸ.ಕಂ** | 3,556.65 | 25,616.08 | 139 | 20,905.72 | 17.01 |
| **ಮ.ವಿ.ಸ.ಕಂ** | 943.26 | 5,658.86 | 167 | 4,176.35 | 22.59 |
| **ಚಾ.ವಿ.ಸ.ನಿ.ನಿ** | 1,005.01 | 6,947.74 | 145 | 5,019.12 | 20.02 |
| **ಹು.ವಿ.ಸ.ಕಂ** | 974.77 | 11,762.58 | 83 | 8,915.95 | 10.93 |
| **ಗು.ವಿ.ಸ.ಕಂ** | 1,286.10 | 7,667.51 | 168 | 5,843.49 | 22.01 |
| **ಒಟ್ಟು** | **7,765.79** | **57,652.77** | **135** | **44,860.63** | **17.31** |

**ಏಕ ರೂಪದ ದರ ಹೆಚ್ಚಳ:**

ರಾಜ್ಯದಲ್ಲಿ ಇದುವರೆವಿಗೂ ಏಕರೂಪದ ವಿದ್ಯುಚ್ಛಕ್ತಿ ದರಗಳು ರೂಢಿಯಲ್ಲಿರುವುದರಿಂದ, ಆಯೋಗವು ಬೆ.ವಿ.ಸ.ಕಂ ಪ್ರದೇಶದಲ್ಲಿ ಸ್ವಲ್ಪ ಪ್ರಮಾಣದ ವಿಭಿನ್ನವಾದ ಏರಿಕೆಯೊಂದಿಗೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಹಾಗೂ HRECs ಗೆ ಏಕರೂಪದ ದರ ಏರಿಕೆಯನ್ನು ಅನುಮೋದಿಸಿದೆ.

ಬೆಂಗಳೂರು ಮೆಟ್ರೋ ಮತ್ತು ವಿದ್ಯುತ್ ವಾಹನಗಳ ಚಾರ್ಜಿಂಗ್ ಸ್ಟೇಶನ್‌ಗಳನ್ನು ಹೊರತುಪಡಿಸಿದಂತೆ, ಎಲ್ಲಾ ಪ್ರವರ್ಗಗಳ ವಿವಿಧ ಹಂತಗಳಲ್ಲಿನ ವಿದ್ಯುತ್ ದರ ಪ್ರತಿ ಯೂನಿಟ್‌ಗೆ 10 ಪೈಸೆ ಹೆಚ್ಚಳವಾಗಿದ್ದು, ನಿಗದಿತ ಶುಲ್ಕದಲ್ಲಿ ರೂ.10 ರಿಂದ ರೂ.20 ರವರೆಗೆ ಹೆಚ್ಚಳವಾಗಿರುತ್ತದೆ. ಒಟ್ಟಾರೆ ಶೇಕಡಾ 3.84 ರ ದರ ಹೆಚ್ಚಳದೊಂದಿಗೆ ವಿದ್ಯಚ್ಛಕ್ತಿ ದರ ಹೆಚ್ಚಳವು (ನಿಗದಿತ ಶುಲ್ಕ ಸೇರಿದಂತೆ) ಪ್ರತಿ ಯೂನಿಟ್‌ಗೆ ಸರಾಸರಿ 30 ಪೈಸೆಗಳು ಆಗಿರುತ್ತದೆ.

ಹಾಲಿ ಇರುವ ವಿದ್ಯುಚ್ಛಕ್ತಿ ದರಗಳ ವ್ಯವಸ್ಥೆಯಲ್ಲಿ ಗ್ರಾಹಕರಿಂದ ವಸೂಲಿಯಾಗುವ ನಿಗದಿತ ಶುಲ್ಕ (Fixed Charges) ವಿದ್ಯುತ್ ಸರಬರಾಜು ಕಂಪನಿಗಳ ವಾಸ್ತವ ನಿಗದಿತ ಖರ್ಚಿಗೆ (Fixed Cost) ಸಮನಾಗಿರುವುದಿಲ್ಲ. ಹೀಗಾಗಿ, ನಿಗದಿತ ಶುಲ್ಕದ ಗಣನೀಯ ಭಾಗವನ್ನು ವಿದ್ಯುಚ್ಛಕ್ತಿ ಶುಲ್ಕದ

ಮೂಲಕ ಮರುಪಡೆಯಲಾಗುತ್ತಿದೆ. ನಿಗದಿತ ಖರ್ಚಿನ ಶೇಕಡ 33 ರಷ್ಟು ಮಾತ್ರ ಹಾಲಿ ನಿಗದಿತ ಶುಲ್ಕದಿಂದ ವಸೂಲಾಗುತ್ತಿದ್ದು, ನಿಗದಿತ ಖರ್ಚಿನ ಉಳಿದ ಭಾಗವನ್ನು ವಿದ್ಯುಚ್ಛಕ್ತಿ ಶುಲ್ಕದ ಮೂಲಕ ವಸೂಲು ಮಾಡಲಾಗುತ್ತಿದೆ. ಆದುದರಿಂದ, ನಿಗದಿತ ಶುಲ್ಕದ ಸಂಪೂರ್ಣ ವಸೂಲಾತಿಯ ದಿಸೆಯಲ್ಲಿ, ನಿಗದಿತ ಶುಲ್ಕವನ್ನು ವರ್ಷದಿಂದ ವರ್ಷಕ್ಕೆ ಕ್ರಮೇಣವಾಗಿ ಹೆಚ್ಚಿಸಲು ಆಯೋಗವು ನಿರ್ಧರಿಸಿರುತ್ತದೆ. ಅದರಂತೆ ಆಯೋಗವು, ಎಲ್ಲಾ ಸ್ಥಾವರಗಳಿಗೆ ಸಂಬಂಧಪಟ್ಟಂತೆ ನಿಗದಿತ ಶುಲ್ಕವನ್ನು ಪ್ರತಿ ಕಿ.ವ್ಯಾ / ಹೆಚ್.ಪಿ / ಕೆ.ವಿ.ಎ ಗೆ ರೂ.10 ರಿಂದ ರೂ.20 ರ ಕನಿಷ್ಠ ಏರಿಕೆಯನ್ನು ಅನುಮೋದಿಸಿದೆ. ನಿಗದಿತ ಶುಲ್ಕದಲ್ಲಿನ ಈ ಕನಿಷ್ಠ ಏರಿಕೆಯೊಂದಿಗೆ, ನಿಗದಿತ ಖರ್ಚಿನ ಚೇತರಿಕೆಯು ಶೇಕಡ 34.29 ರಷ್ಟಿರುತ್ತದೆ.

**ಹೊಸ ದರ ಆದೇಶದ ಪ್ರಮುಖ ಅಂಶಗಳು:**

- **ಟಿ.ಒ.ಡಿ ದರದಲ್ಲಿ ಬೆಳಗಿನ ಹಾಗೂ ಸಂಜೆಯ ಗರಿಷ್ಠ ಬಳಕೆ (Peak) ಅನ್ನು ತಗೆದುಹಾಕಲಾಗಿರುವುದು:**

  ಹೆಚ್.ಟಿ ಕೈಗಾರಿಕೆಗಳಲ್ಲಿನ ವಿದ್ಯುಚ್ಛಕ್ತಿ ಬಳಕೆಯನ್ನು ಪ್ರೋತ್ಸಾಹಿಸಲು ಬೆಳಗಿನ 6 ಘಂಟೆಯಿಂದ 10 ಘಂಟೆಯಲ್ಲಿನ ಬೆಳಗಿನ ಗರಿಷ್ಠ ಬೇಡಿಕೆ ಅವಧಿಯಲ್ಲಿನ ವಿದ್ಯುಚ್ಛಕ್ತಿ ಬಳಕೆಗೆ ವಿದಿಸಲಾಗುತ್ತಿದ್ದ ರೂ.1 ದಂಡವನ್ನು 2020 ರ ದರ ಪರಿಷ್ಕರಣೆ ಆದೇಶದಲ್ಲಿ ಹಿಂಪಡೆಯಲಾಗಿದ್ದು, ಅದನ್ನು ಮುಂದುವರಿಸಲಾಗಿದೆ.

  **ಜುಲೈ ನಿಂದ ನವೆಂಬರ್** ವರೆಗಿನ ಮುಂಗಾರು ಅವಧಿಯಲ್ಲಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳು ಹಾಗೂ ಎಸ್.ಎಲ್.ಡಿ.ಸಿ ಯೋಜಿಸಿದಂತೆ ಲಭ್ಯವಿರುವ ಹೆಚ್ಚುವರಿ ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳುವ ಉದ್ದೇಶದಿಂದ ಹಾಗೂ ಹೆಚ್.ಟಿ ಗ್ರಾಹಕರ ಸಂಜೆ ಗರಿಷ್ಠ ಬೇಡಿಕೆ ಅವಧಿಯಲ್ಲಿನ ವಿದ್ಯುಚ್ಛಕ್ತಿ ಬಳಕೆಯನ್ನು ಪ್ರೋತ್ಸಾಹಿಸಲು, 18.00 ಘಂಟೆಯಿಂದ 22.00 ಘಂಟೆಯ ಸಂಜೆ ಗರಿಷ್ಠ ಬೇಡಿಕೆ ಅವಧಿಯಲ್ಲಿನ ವಿದ್ಯುಚ್ಛಕ್ತಿ ಬಳಕೆಗೆ ವಿದಿಸಲಾಗುತ್ತಿದ್ದ ರೂ.1 ದಂಡವನ್ನು ಹಿಂಪಡೆಯಲಾಗಿದೆ. ಆರ್ಥಿಕ ವರ್ಷದ **ಇತರೆ ತಿಂಗಳುಗಳಲ್ಲಿ** ವಿದಿಸಲಾಗುತ್ತಿದ್ದ ಸಂಜೆ ಗರಿಷ್ಠ ಅವಧಿಯ ಟಿ.ಒ.ಡಿ ದರವನ್ನು, 18.00 ಘಂಟೆಯಿಂದ 22.00 ಘಂಟೆಯ ಸಂಜೆ ಗರಿಷ್ಠ ಬೇಡಿಕೆ ಅವಧಿಯಲ್ಲಿನ ವಿದ್ಯುಚ್ಛಕ್ತಿ ಬಳಕೆಗೆ ಮುಂದುವರಿಸಲಾಗಿದೆ ಮತ್ತು ಹಾಲಿ ಇರುವ ವಿದ್ಯುಚ್ಛಕ್ತಿ ದರಗಳ ವ್ಯವಸ್ಥೆ ಪ್ರಕಾರ **ಡಿಸೆಂಬರ್ ನಿಂದ ಜೂನ್** ವರೆಗೆ ನೀಡಲಾಗುವ ಮಾಸಿಕ ಬಿಲ್ ಗಳಲ್ಲಿ ರೂ.1 ದಂಡವನ್ನು ವಿಧಿಸಲಾಗುತ್ತದೆ. ಅದೇ ರೀತಿ, **ಜುಲೈ 2021 ರಿಂದ ನವೆಂಬರ್ 2021** ರವರೆಗೆ 22.00 ಗಂಟೆಯಿಂದ 06.00 ಗಂಟೆಗಳವರೆಗಿನ ಗರಿಷ್ಠವಲ್ಲದ ಅವಧಿಯಲ್ಲಿ ಬಳಸಲಾಗುವ ವಿದ್ಯುಚ್ಛಕ್ತಿ ಬಳಕೆ ಮೇಲೆ ನೀಡಲಾಗುವ ರೂ.1 ರ ರಿಯಾಯಿತಿಯನ್ನು ಹಿಂಪಡೆಯಲಾಗಿರುತ್ತದೆ. ಆರ್ಥಿಕ ವರ್ಷದ ಇತರೆ ತಿಂಗಳುಗಳಲ್ಲಿ (**ಡಿಸೆಂಬರ್ ನಿಂದ ಜೂನ್**), 22.00 ಘಂಟೆಯಿಂದ 6.00 ಘಂಟೆ ವರೆಗಿನ ಗರಿಷ್ಠವಲ್ಲದ ಅವಧಿಯಲ್ಲಿ ಬಳಸುವ ವಿದ್ಯುಚ್ಛಕ್ತಿಗೆ ಹಾಲಿ ಟಿ.ಒ.ಡಿ ದರವನ್ನು ಮುಂದುವರಿಸಲಾಗಿದೆ.

- **ಹೊಸ "ರಿಯಾಯಿತಿ ವಿದ್ಯುಚ್ಛಕ್ತಿ ದರ" ಯೋಜನೆ:**

  ವಿಶೇಷವಾಗಿ **ಜುಲೈ ನಿಂದ ಡಿಸೆಂಬರ್** ವರೆಗಿನ ಹೆಚ್ಚುವರಿ ವಿದ್ಯುತ್ ಲಭ್ಯತೆಯ / ಮುಂಗಾರು / ಅಸಮಯ ಅವಧಿಯಲ್ಲಿ (Off-season) (ಜುಲೈಯಿಂದ ಡಿಸೆಂಬರ್ ಅವಧಿಗೆ), ಕೈಗಾರಿಕೆಗಳು, ವಾಣಿಜ್ಯ, ಎಲ್ಲಾ ಆಸ್ಪತ್ರೆಗಳು, ಎಲ್ಲಾ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಎಲ್ಲಾ ಶಿಕ್ಷಣ ಸಂಸ್ಥೆಗಳ ವಸತಿ ನಿಲಯಗಳು ಮುಂತಾದ ಎಚ್‌ಟಿ ಸ್ಥಾವರಗಳಲ್ಲಿ ಅವುಗಳ ಮೂಲ / ಕ್ರಮಬದ್ಧವಾದ ಬಳಕೆಗಿಂತ ಹೆಚ್ಚಿನ ವಿದ್ಯುಚ್ಛಕ್ತಿ ಬಳಕೆ ಮಾಡಲು ಪ್ರೋತ್ಸಾಹಿಸುವ ಸಲುವಾಗಿ ಆಯೋಗವು ಷರತ್ತುಗಳಿಗೊಳಪಟ್ಟು ಹೊಸ "ರಿಯಾಯಿತಿ ವಿದ್ಯುಚ್ಛಕ್ತಿ ದರ" ಯೋಜನೆಯನ್ನು ಜಾರಿಗೆ ತಂದಿರುತ್ತದೆ.

  ಲಭ್ಯವಿರುವ ಹೆಚ್ಚುವರಿ ವಿದ್ಯುಚ್ಛಕ್ತಿಯನ್ನು, ಹೆಚ್ಚುವರಿ ವಿದ್ಯುತ್ ಲಭ್ಯತೆಯ / ಮುಂಗಾರು / ಅಸಮಯ ಅವಧಿಯಲ್ಲಿ (ಜುಲೈ ತಿಂಗಳಿಂದ ಡಿಸೆಂಬರ್ ತಿಂಗಳ ಅವಧಿಯಲ್ಲಿ), ಮೇಲೆ ತಿಳಿಸಲಾದ ಹೆಚ್.ಟಿ. ಸ್ಥಾವರಗಳಿಗೆ, 01.04.2021 ರಂತೆ ಅವುಗಳ ಮೂಲ / ಕ್ರಮಬದ್ಧ ಬಳಕೆಗಿಂತ ಹೆಚ್ಚಿನ ವಿದ್ಯುಚ್ಛಕ್ತಿ ಬಳಕೆಗೆ ರೂ.6 ಪ್ರತಿ ಯೂನಿಟ್ ದರದಲ್ಲಿ ಮಾರಾಟ ಮಾಡಲು ಅನುಮೋದಿಸಲಾಗಿರುತ್ತದೆ.

- **ಎಲ್ ಟಿ ಪವರ್ ಮಂಜೂರಾತಿ ಮಿತಿಯನ್ನು 150 ಕಿ.ವ್ಯಾ.ಗೆ ಹೆಚ್ಚಳ:**

  ವ್ಯವಹಾರವನ್ನು ಸುಗಮೀಕರಣ (EODB - ಇಒಡಿಬಿ) ಅನ್ನು ಸಕ್ರಿಯಗೊಳಿಸಲು, ಆಯೋಗವು ರಾಜ್ಯಪತ್ರದ ಅಧಿಸೂಚನೆ ಸಂಖ್ಯೆ ಕೆಇಆರ್ ಸಿ/ಸಿಒಎಸ್/ಟೆಕ್/ಡಿಡಿ/05/20-21/976, ಬೆಂಗಳೂರು, ದಿನಾಂಕ 11.12.2020 ರ ಮೂಲಕ 400 V, 50 ಸೈಕಲ್ಸ್, 3 ಫೇಸ್‌ನಲ್ಲಿ ವಿದ್ಯುತ್ ಪಡೆಯುವ ಹೊರೆಯ ಮಿತಿಯನ್ನು ಹಾಲಿ ಇರುವ 50 kW ಗಳಿಂದ 150 kW ಗೆ ಹೆಚ್ಚಿಸಿದೆ.

  400 V, 50 ಸೈಕಲ್ಸ್, 3 ಫೇಸ್‌ನಲ್ಲಿ, 50 ಕಿಲೋವ್ಯಾಟ್‌ನಿಂದ 150 ಕಿಲೋವ್ಯಾಟ್ ನಡುವೆ ವಿದ್ಯುತ್ ಹೊರೆಯ ಸಂಪರ್ಕ ಪಡೆಯುವಂತಹ ಎಲ್‌ಟಿ ಸ್ಥಾವರಗಳಿಗೆ, ಹೆಚ್.ಟಿ. ಸ್ಥಾವರಗಳಲ್ಲಿ ಅಳವಡಿಸುವ **ಮೀಟರಿಂಗ್ ನ ನಿಖರತೆಯ ವರ್ಗದ ಮೀಟರಿಂಗ್ (ಸಿ.ಟಿ ಗಳನ್ನು ಒಳಗೊಂಡಂತೆ) ಮತ್ತು ಎಚ್‌ಟಿ ಸ್ಥಾವರಗಳಲ್ಲಿ ಅಳವಡಿಸಲಾಗುವ ಮೀಟರಿಂಗ್ ಕ್ಯುಬಿಕಲ್‌ಗಳಿಗೆ ಅನುಗುಣವಾದ ಮೀಟರಿಂಗ್ ಕ್ಯುಬಿಕಲ್ ಅನ್ನು ಅಳವಡಿಸುವ ಮೂಲಕವೇ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಆಯೋಗವು ವಿದ್ಯುತ್ ಸರಬರಾಜು ಕಂಪನಿಗಳಿಗೆ ನಿರ್ದೇಶನಗಳನ್ನು ನೀಡುತ್ತದೆ**. ಅಲ್ಲದೆ, ಆಯೋಗವು 50 ಕಿಲೋವ್ಯಾಟ್‌ನಿಂದ 150 ಕಿಲೋವ್ಯಾಟ್ ನಡುವೆ ವಿದ್ಯುತ್ ಹೊರೆಯ ಸಂಪರ್ಕ ಪಡೆಯುವಂತಹ ಎಲ್‌ಟಿ ಸ್ಥಾವರ ಪ್ರವರ್ಗಗಳಿಗೆ ಹೊಸದಾಗಿ ನಿಗದಿತ ಶುಲ್ಕ ಮತ್ತು ವಿದ್ಯುಚ್ಛಕ್ತಿ ಬಳಕೆ ಶುಲ್ಕವನ್ನು ಯುಕ್ತವಾಗಿ ನಿರ್ಧರಿಸಿದೆ.

- **ಗೃಹ ಬಳಕೆ ಪ್ರವರ್ಗದಲ್ಲಿ ಮೊದಲ ಹಂತವನ್ನು 30 ಯೂನಿಟ್ ಗಳಿಂದ 50 ಯೂನಿಟ್ ಗಳಿಗೆ ಹೆಚ್ಚಿಸಿರುವುದು:**

  ಕಡಿಮೆ ಮತ್ತು ಮಧ್ಯಮ ವರ್ಗದ ಗೃಹ ಬಳಕೆ ಗ್ರಾಹಕರ ವಿದ್ಯುಚ್ಛಕ್ತಿ ಬಳಕೆಯನ್ನು ಉತ್ತೇಜಿಸಲು, 0-30 ಯೂನಿಟ್‌ಗಳ ಮೊದಲ ಹಂತವನ್ನು (ಲೈಫ್‌ಲೈನ್ ಬಳಕೆ) 0-50 ಯೂನಿಟ್‌ಗಳಿಗೆ ಹೆಚ್ಚಿಸಲಾಗಿದೆ.

- **ಸಾರ್ವಜನಿಕ ಬೀದಿ ದೀಪಗಳಲ್ಲಿ ಎಲ್‌ಇಡಿ ಬಲ್ಬ್‌ಗಳ ಬಳಕೆಗೆ ರಿಯಾಯಿತಿ:**

  ಸಾರ್ವಜನಿಕ ಬೀದಿ ದೀಪಗಳಲ್ಲಿ ಎಲ್‌ಇಡಿ ಬಲ್ಬ್‌ಗಳನ್ನು ಬಳಸುವ ಮೂಲಕ ವಿದ್ಯುಚ್ಛಕ್ತಿಯ ಸಂರಕ್ಷಣೆಯನ್ನು ಉತ್ತೇಜಿಸಲು, ಆಯೋಗವು ಬಿಬಿಎಂಪಿ ಸೇರಿದಂತೆ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಬೀದಿ ದೀಪಗಳಿಗೆ ಎಲ್‌ಇಡಿ / ಇಂಡಕ್ಷನ್ ಲ್ಯಾಂಪ್ ಲೈಟಿಂಗ್ ಅನ್ನು ಸ್ಥಾಪಿಸಿದಲ್ಲಿ ಪ್ರತಿ ಯೂನಿಟ್‌ಗೆ ನೀಡಲಾಗುವ 105 ಪೈಸೆಗಳ ರಿಯಾಯಿತಿಯನ್ನು ಮುಂದುವರಿಸಿದೆ.

- **ಹೆಚ್.ಟಿ ಗ್ರಾಹಕರಿಗೆ ವಿಶೇಷ ಪ್ರೋತ್ಸಾಹ ಯೋಜನೆ (Special Incentive Scheme):**

  ಆಯೋಗವು 2018 ರ ದರ ಆದೇಶದಲ್ಲಿ ಎಲ್ಲಾ ಹೆಚ್.ಟಿ. ಗ್ರಾಹಕರಿಗಾಗಿ ಜಾರಿಗೊಳಿಸಿದ್ದ ವಿಶೇಷ ಪ್ರೋತ್ಸಾಹ ಯೋಜನೆಯನ್ನು ಮುಂದಿನ ಆರ್ಥಿಕ ವರ್ಷಕ್ಕೆ ಮುಂದುವರಿಸಿದೆ. ಅದರಂತೆ, 10.00 ಘಂಟೆಯಿಂದ 18.00 ಘಂಟೆಯ ಸಮಯದಲ್ಲಿನ ವಿದ್ಯುಚ್ಛಕ್ತಿ ಬಳಕೆಗಾಗಿ, ಸ್ಥಾವರಗಳ ಮೂಲ ಬಳಕೆಗಿಂತ ಹೆಚ್ಚಿನ ಪ್ರತಿ ಯೂನಿಟ್‌ಗೆ ರೂ.1 ರ ಪ್ರೋತ್ಸಾಹವನ್ನು, ಮತ್ತು ರಾತ್ರಿ 22.00 ಘಂಟೆಯಿಂದ 6.00 ಘಂಟೆಗಳವರೆಗಿನ ಬಳಕೆಗಾಗಿ, ಎಲ್ಲಾ ಘಟಕಗಳಿಗೆ ಪ್ರತಿ ಯೂನಿಟ್‌ಗೆ ರೂ.2 ರ ಪ್ರೋತ್ಸಾಹವನ್ನು ಮತ್ತು ಸಂಜೆಯ ಗರಿಷ್ಠ ಅವಧಿ, 18.00 ಘಂಟೆಯಿಂದ 22.00 ಘಂಟವರೆಗಿನ ಸಮಯದಲ್ಲಿ ಬಳಸುವ ವಿದ್ಯುಚ್ಛಕ್ತಿಗೆ, ಪ್ರತಿ ಯೂನಿಟ್‌ಗೆ ರೂ.1 ರ ದಂಡ ಶುಲ್ಕವನ್ನು ಆಯೋಗವು ವಿದ್ಯುತ್ ದರ ಆದೇಶ 2021 ರಲ್ಲಿ ತಿಳಿಸಿರುವಂತೆ ವಿಧಿಸಲಾಗುವುದು.

- **ಬಿ.ಎಂ.ಆರ್.ಸಿ.ಎಲ್ ಗೆ ಅನ್ವಯಿಸುವ ದರದಲ್ಲಿ ಯಾವುದೇ ಹೆಚ್ಚಳವಿರುವುದಿಲ್ಲ:**

  ರಾಜ್ಯದಲ್ಲಿ ಶುದ್ಧ ಇಂಧನ ಬಳಕೆ ಮತ್ತು ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಮತ್ತು ಸಾರ್ವಜನಿಕ ಸಾರಿಗೆಯನ್ನು ಬಳಸಲು ಪ್ರಯಾಣಿಕರನ್ನು ಉತ್ತೇಜಿಸಲು, **ಆಯೋಗವು ಬಿಎಂಆರ್ ಸಿಎಲ್ ಗೆ ವಿದಿಸುವ ವಿದ್ಯುಚ್ಛಕ್ತಿ ದರವನ್ನು ಹೆಚ್ಚಿಸಿಲ್ಲ ಮತ್ತು ಪ್ರಸ್ತುತ ಇರುವ ಪ್ರತಿ ಯೂನಿಟ್ ಗೆ ರೂ.5.20 ರಿಯಾಯಿತಿ ದರವನ್ನು ಮುಂದುವರಿಸಲು ಅನುಮೋದನೆ ನೀಡಿದೆ** ಹಾಗೂ ಟಿಓಡಿ ದರ ಮತ್ತು ವಿಶೇಷ ಪ್ರೋತ್ಸಾಹಕ ಯೋಜನೆ ಇಲ್ಲದೆ ಪ್ರತಿ ಯೂನಿಟ್ ಗೆ 10 ಪೈಸೆ ಹೆಚ್ಚಿಸುವ ಮೂಲಕ ರೈಲ್ವೆ ಟ್ರಾಕ್ಷನ್‌ಗೆ ರಿಯಾಯಿತಿ ದರವನ್ನು ಪ್ರತಿ ಯೂನಿಟ್ ಗೆ ರೂ.6.55 ಗೆ ನಿಗದಿಪಡಿಸಿದೆ.

- ಗ್ರಾಹಕರ ಸ್ಥಾವರಗಳ ಆವರಣಗಳಲ್ಲಿ ಸ್ಥಾಪಿತವಾದ ತ್ಯಾಜ್ಯ ಸಂಸ್ಕರಣಾ ಘಟಕ ಮತ್ತು ಒಳ ಚರಂಡಿ / ಕೊಳಚೆ ನೀರು ಸಂಸ್ಕರಣಾ ಘಟಕಗಳಿಗೆ ಆಯಾ ವರ್ಗದ ಸ್ಥಾವರಗಳಿಗೆ ಅನ್ವಯವಾಗುವ ದರದಲ್ಲಿ ಬಿಲ್ ಮಾಡುವುದನ್ನು ಮುಂದುವರಿಸಲಾಗಿದೆ.
- ಘನ ತ್ಯಾಜ್ಯವನ್ನು ಸಂಸ್ಕರಣೆಯಿಂದಾಗುವ ಪರಿಸರ ಮತ್ತು ಸಾಮಾಜಿಕ ಪ್ರಯೋಜನಗಳನ್ನು ಪರಿಗಣಿಸಿ ಆಯೋಗವು, ಕೈಗಾರಿಕೆಗಳ ಆವರಣದಲ್ಲಿ ಇರುವ ಘನತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಎಲ್‌ಟಿ ಮತ್ತು ಎಚ್‌ಟಿ ಕೈಗಾರಿಕಾ ವರ್ಗದ ದರ ಅನ್ವಯಿಸುವುದನ್ನು ಮುಂದುವರಿಸಿದೆ.
- ಗ್ರಾಹಕರ ಕುಂದು ಕೊರತೆಗಳನ್ನು ಕಾಲ ಮಿತಿಯೊಳಗೆ ಪರಿಹರಿಸಲು, ಆಯೋಗವು ತನ್ನ ಹಿಂದಿನ ನಿರ್ದೇಶನವನ್ನು ಪುನರುಚ್ಚರಿಸುತ್ತಾ, ವಿದ್ಯುತ್ ಸರಬರಾಜು ಕಂಪನಿಗಳು ಪ್ರತಿ ಉಪವಿಭಾಗದಲ್ಲಿ ಗ್ರಾಹಕ ಸಂವಹನ ಸಭೆಗಳನ್ನು, ಸಂಬಂಧಿಸಿದ ವ್ಯಾಪ್ತಿಯ ಅಧೀಕ್ಷಕ ಇಂಜಿನಿಯರು ಅಥವಾ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರ ಅಧ್ಯಕ್ಷತೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ನಡೆಸುವುದನ್ನು ಮುಂದುವರಿಸುವಂತೆ ನಿರ್ದೇಶಿಸಿದೆ. ಅಂತಹ ಸಭೆಗಳನ್ನು ನಡೆಸಲು ವಿಫಲವಾದರೆ, ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯ ಸುಸ್ತಿದಾರ ಅಧಿಕಾರಿಗಳಿಂದ ಪಾವತಿಯಗುವಂತೆ ಆಯೋಗವು ಪ್ರತಿ ಉಪ ವಿಭಾಗಕ್ಕೆ ಒಂದು ಲಕ್ಷ ರೂಪಾಯಿಗಳವರೆಗೆ ದಂಡವನ್ನು ವಿಧಿಸುತ್ತದೆ.

- **ಬ್ಯಾಟರಿ ಚಾರ್ಜಿಂಗ್ ಕೇಂದ್ರಗಳಿಗೆ ರಿಯಾಯಿತಿ ವಿದ್ಯುಚ್ಛಕ್ತಿ ದರ:**

  ಕರ್ನಾಟಕ ರಾಜ್ಯ ಸರ್ಕಾರದ " ವಿದ್ಯುತ್ ವಾಹನ (ಇವಿ) ಮತ್ತು ಇಂಧನ ಶೇಖರಣಾ ನೀತಿ" ವಿಷಯದ ಹಿನ್ನೆಲೆಯಲ್ಲಿ, ಶುದ್ಧ ಇಂಧನ ಮತ್ತು ವಿದ್ಯುತ್ ವಾಹನ ಬಳಕೆಯನ್ನು ಉತ್ತೇಜಿಸಲು ಹಾಗೂ ಶೇಕಡಾ 100 ರಷ್ಟು ವಿದ್ಯುತ್ ಚಲನಶೀಲತೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಮತ್ತು ಪರಿಸರ ಕಾಳಜಿಯೊಂದಿಗೆ ಆಯೋಗವು 2018 ರ ದರ ಆದೇಶದಲ್ಲಿ ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳಿಗೆ ಪರಚಯಿಸಿದ್ದ ಹೊಸ ದರ ಪ್ರವರ್ಗ ಎಲ್ ಟಿ 6(ಸಿ) ಅನ್ನು ಮುಂದುವರಿಸಿದೆ. ಈ ಜಕಾತಿಯು LT ಹಾಗೂ HT ಎರಡೂ ವರ್ಗಗಳಿಗೆ ಅನ್ವಯವಾಗಲಿದೆ. **ವಿದ್ಯುತ್ ವಾಹನ ಬಳಕೆಯನ್ನು ಉತ್ತೇಜಿಸುವ ಸಲುವಾಗಿ, ಆರ್ಥಿಕ ವರ್ಷ 2022 ಕ್ಕೆ ಯಾವುದೇ ದರ ಹೆಚ್ಚಳವಿಲ್ಲದೆ ಅಸ್ತಿತ್ವದಲ್ಲಿರುವ ರಿಯಾಯಿತಿ ದರ ಪ್ರತಿ ಯೂನಿಟ್‌ಗೆ ರೂ.5 ಅನ್ನು ಮುಂದುರೆಸಿದೆ**. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ, ಬ್ಯಾಟರಿ ಸ್ವ್ಯಾಪಿಂಗ್ ಇರುವಂತಹ ವಿದ್ಯುತ್ ವಾಹನಗಳಲ್ಲಿ ಬಳಸುವ **ಬ್ಯಾಟರಿಗಳನ್ನು ಚಾರ್ಜ ಮಾಡುವ ಘಟಕಗಳಿಗೂ ರಿಯಾಯಿತಿ ದರವನ್ನು ಆಯೋಗವು ವಿಸ್ತರಿಸಿದೆ**.

- **ಆರ್ಥಿಕ ವರ್ಷ 2022 ರ ವಿದ್ಯುತ್ ದರ ಆದೇಶ 2021 ರ ಪ್ರಮುಖ ಆಂಶಗಳು:**
- **ಗೃಹ ಬಳಕೆ ಗ್ರಾಹಕರಿಗೆ ಅನ್ವಯವಾಗುವ ದರಗಳು:**

  **ಬೆಸ್ಕಾಂ ವ್ಯಾಪ್ತಿಯ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಇತರೆ ಪುರಸಭೆ ಪ್ರದೇಶಗಳಲ್ಲಿನ** ಗೃಹ ಬಳಕೆ ಗ್ರಾಹಕರಿಗೆ ಹಾಗೂ ಸರ್ಕಾರಿ / ಧರ್ಮಾರ್ಥ ಸಂಸ್ಥೆಗಳು ನಡೆಸುವ

ವಿದ್ಯಾ ಸಂಸ್ಥೆಗಳು ಮತ್ತು ಆಸ್ಪತ್ರೆಗಳ ಸ್ಥಾವರಗಳ ವಿದ್ಯುಚ್ಛಕ್ತಿ ದರಗಳಲ್ಲಿನ ಹೆಚ್ಚಳವು ಪ್ರತಿ ಯೂನಿಟ್‌ಗೆ 10 ಪೈಸೆಯಾಗಿದೆ. 0 - 50 ಯೂನಿಟ್ ಗಳ (ಈ ಹಿಂದೆ 0 - 30 ಯೂನಿಟ್ ಗಳು) ಮಾಸಿಕ ಬಳಕೆಯ ವಿದ್ಯುಚ್ಛಕ್ತಿ ದರವನ್ನು ಪ್ರತಿ ಯೂನಿಟ್ ಗೆ ರೂ.4.00 ಗಳಿಂದ ಪ್ರತಿ ಯೂನಿಟ್ ಗೆ ರೂ.4.10 ಗಳಿಗೆ ಹೆಚ್ಚಿಸಲಾಗಿದೆ ಮತ್ತು 51 ರಿಂದ 100 ಯೂನಿಟ್ ಗಳ ನಡುವಿನ ಬಳಕೆಗಾಗಿ (ಈ ಹಿಂದೆ 31 ರಿಂದ 100 ಯೂನಿಟ್ ಗಳು), ದರವನ್ನು ಪ್ರತಿ ಯೂನಿಟ್ ಗೆ ರೂ.5.45 ರಿಂದ ಪ್ರತಿ ಯೂನಿಟ್ ಗೆ ರೂ.5.55 ಕ್ಕೆ ಹೆಚ್ಚಿಸಲಾಗಿದೆ. 101-200 ಯೂನಿಟ್ ಗಳ ಮಾಸಿಕ ಬಳಕೆಯ ದರವನ್ನು ಪ್ರತಿ ಯೂನಿಟ್ ಗೆ ರೂ.7.00 ರಿಂದ ರೂ.7.10 ಕ್ಕೆ ಹೆಚ್ಚಿಸಲಾಗಿದೆ. 200 ಯೂನಿಟ್ ಗಳಿಗಿಂತ ಹೆಚ್ಚಿನ ಮಾಸಿಕ ಬಳಕೆಯ ದರವನ್ನು ಪ್ರತಿ ಯೂನಿಟ್ ಗೆ ರೂ.8.05 ರಿಂದ ರೂ.8.15 ಕ್ಕೆ ಹೆಚ್ಚಿಸಲಾಗಿದೆ.

**ಬೆಸ್ಕಾಂ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಅಡಿಯ ಗ್ರಾಮೀಣ ಪ್ರದೇಶದ ಗೃಹ ಬಳಕೆದಾರರಿಗೆ** ಮೊದಲ 50 ಯೂನಿಟ್‌ಗಳವರೆಗಿನ (ಈ ಹಿಂದೆ 30 ಯೂನಿಟ್‌ಗಳವರೆಗೆ) ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಈಗಿರುವ ದರವಾದ ಪ್ರತಿ ಯೂನಿಟ್‌ಗೆ ರೂ.3.90 ರಿಂದ ಪ್ರತಿ ಯೂನಿಟ್‌ಗೆ ರೂ.4.00 ಕ್ಕೆ ಹೆಚ್ಚಿಸಲಾಗಿದೆ ಮತ್ತು 51 ರಿಂದ 100 ಯೂನಿಟ್ ಗಳ ನಡುವಿನ ಬಳಕೆಗಾಗಿ (ಈ ಹಿಂದೆ 31 ರಿಂದ 100 ಯೂನಿಟ್ ಗಳು) ದರವನ್ನು ಪ್ರತಿ ಯೂನಿಟ್ ಗೆ ರೂ.5.15 ರಿಂದ ಪ್ರತಿ ಯೂನಿಟ್ ಗೆ ರೂ.5.25 ಕ್ಕೆ ಹೆಚ್ಚಿಸಲಾಗಿದೆ. 101-200 ಯೂನಿಟ್ ಗಳ ಮಾಸಿಕ ಬಳಕೆಯ ದರವನ್ನು ಪ್ರತಿ ಯೂನಿಟ್ ಗೆ ರೂ.6.70 ಗಳಿಂದ ರೂ.6.80 ಕ್ಕೆ ಹೆಚ್ಚಿಸಲಾಗಿದೆ. 200 ಯೂನಿಟ್ ಗಳಿಗಿಂತ ಹೆಚ್ಚಿನ ಮಾಸಿಕ ಬಳಕೆಯ ದರವನ್ನು ಪ್ರತಿ ಯೂನಿಟ್ ಗೆ ರೂ.7.55 ರಿಂದ ರೂ.7.65 ಕ್ಕೆ ಹೆಚ್ಚಿಸಲಾಗಿದೆ.

**ಇತರೆ ಎಲ್ಲಾ ಎಸ್ಕಾಂಗಳ ನಗರ ಪಾಲಿಕೆ ಹಾಗೂ ಪುರಸಭೆ ಪ್ರದೇಶಗಳಲ್ಲಿನ ಗೃಹ ಬಳಕೆಯ ಗ್ರಾಹಕರಿಗೆ**, 50 ಯೂನಿಟ್ ಗಳವರೆಗೆ (ಈ ಹಿಂದೆ 30 ಯೂನಿಟ್ ಗಳವರೆಗೆ) ಮಾಸಿಕ ಬಳಕೆಯ ದರವನ್ನು ಪ್ರತಿ ಯೂನಿಟ್ ಗೆ ರೂ.3.95 ಗಳಿಂದ ಪ್ರತಿ ಯೂನಿಟ್ ಗೆ ರೂ.4.05 ಕ್ಕೆ ಹೆಚ್ಚಿಸಲಾಗಿದೆ ಮತ್ತು 51 ಯೂನಿಟ್ ಗಳಿಂದ 100 ಯೂನಿಟ್ ಗಳವರೆಗೆ (ಈ ಹಿಂದೆ 31 ರಿಂದ 100 ಯೂನಿಟ್ ಗಳು) ಬಳಕೆಗಾಗಿ, ದರವನ್ನು ಪ್ರತಿ ಯೂನಿಟ್ ಗೆ ರೂ.5.45 ರಿಂದ ಪ್ರತಿ ಯೂನಿಟ್ ಗೆ ರೂ.5.55 ಕ್ಕೆ ಹೆಚ್ಚಿಸಲಾಗಿದೆ. 101-200 ಯೂನಿಟ್ ಗಳ ಮಾಸಿಕ ಬಳಕೆಯ ದರವನ್ನು ಪ್ರತಿ ಯೂನಿಟ್ ಗೆ ರೂ.7.00 ರಿಂದ ರೂ.7.10 ಕ್ಕೆ ಹೆಚ್ಚಿಸಲಾಗಿದೆ. 200 ಯೂನಿಟ್ ಗಳಿಗಿಂತ ಹೆಚ್ಚಿನ ಮಾಸಿಕ ಬಳಕೆಯ ದರವನ್ನು ಪ್ರತಿ ಯೂನಿಟ್ ಗೆ ರೂ.8.05 ರಿಂದ ರೂ.8.15 ಕ್ಕೆ ಹೆಚ್ಚಿಸಲಾಗಿದೆ.

**ಇತರೆ ಎಲ್ಲಾ ಎಸ್ಕಾಂಗಳ ಗ್ರಾಮ ಪಂಚಾಯಿತಿಗಳ ಪ್ರದೇಶಗಳಲ್ಲಿನ ಗೃಹ ಬಳಕೆ ಗ್ರಾಹಕರಿಗೆ**, 50 ಯೂನಿಟ್ ಗಳವರೆಗೆ (ಈ ಹಿಂದೆ 30 ಯೂನಿಟ್ ಗಳು) ಮಾಸಿಕ ಬಳಕೆಯ ದರವನ್ನು ಪ್ರತಿ ಯೂನಿಟ್ ಗೆ ರೂ.3.85 ಗಳಿಂದ ರೂ.3.95 ಕ್ಕೆ ಮತ್ತು 51 ರಿಂದ 100 ಯೂನಿಟ್ ಗಳ ನಡುವೆ (ಈ ಹಿಂದೆ 31 ರಿಂದ 100 ಯೂನಿಟ್ ಗಳು) ಬಳಕೆಗಾಗಿ, ದರವನ್ನು ಪ್ರತಿ ಯೂನಿಟ್ ಗೆ ರೂ.5.15 ರಿಂದ ರೂ.5.25 ಕ್ಕೆ ಹೆಚ್ಚಿಸಲಾಗಿದೆ. 101-200 ಯೂನಿಟ್ ಗಳ ಮಾಸಿಕ ಬಳಕೆಯ ದರವನ್ನು ಪ್ರತಿ ಯೂನಿಟ್ ಗೆ ರೂ.6.70 ಗಳಿಂದ ರೂ.6.80 ಕ್ಕೆ ಹೆಚ್ಚಿಸಲಾಗಿದೆ. 200 ಯೂನಿಟ್

ಗಳಿಗಿಂತ ಹೆಚ್ಚಿನ ಮಾಸಿಕ ಬಳಕೆಯ ಸುಂಕವನ್ನು ಪ್ರತಿ ಯೂನಿಟ್ ಗೆ ರೂ.7.55 ರಿಂದ ರೂ.7.65 ಕ್ಕೆ ಹೆಚ್ಚಿಸಲಾಗಿದೆ.

- **ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:**

ರಾಜ್ಯದಾದ್ಯಂತ **ಎಲ್ ಟಿ ಕೈಗಾರಿಕಾ ಗ್ರಾಹಕರಿಗೆ** ವಿದ್ಯುಚ್ಛಕ್ತಿ ಬಳಕೆ ದರದ ಹೆಚ್ಚಳವು ಪ್ರತಿ ಯೂನಿಟ್ ಗೆ 10 ಪೈಸೆಯಾಗಿದೆ. **ಬೆಸ್ಕಾಂನ ಬಿಬಿಎಂಪಿ ಮತ್ತು ಇತರ ಪುರಸಭೆ ಪ್ರದೇಶಗಳಲ್ಲಿನ ಎಲ್ ಟಿ ಕೈಗಾರಿಕಾ ಬಳಕೆದಾರರಿಗೆ** ಪರಿಷ್ಕೃತ ದರಗಳು ಮಾಸಿಕ ಬಳಕೆಯ ಮೊದಲ 500 ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.6.00 (ಅಸ್ತಿತ್ವದಲ್ಲಿರುವ ದರ ರೂ.5.90) ಮತ್ತು 500 ಯೂನಿಟ್ ಗಳಿಗಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್ ಗೆ ರೂ.7.30 (ಅಸ್ತಿತ್ವದಲ್ಲಿರುವ ದರ ರೂ.7.20) ಆಗಿರುತ್ತದೆ.

**ಬೆಸ್ಕಾಂ ವ್ಯಾಪ್ತಿಯ ಇತರ ಪ್ರದೇಶಗಳಲ್ಲಿನ ಎಲ್ ಟಿ ಕೈಗಾರಿಕಾ ಬಳಕೆದಾರರಿಗೆ** ಪರಿಷ್ಕೃತ ದರಗಳು ಮಾಸಿಕ ಬಳಕೆಯ ಮೊದಲ 500 ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.5.70 (ಅಸ್ತಿತ್ವದಲ್ಲಿರುವ ದರ ರೂ.5.60) ಮತ್ತು 501 ರಿಂದ 1000 ಯೂನಿಟ್ ಗಳವರೆಗೆ ಪ್ರತಿ ಯೂನಿಟ್ ಗೆ ರೂ.6.65 (ಅಸ್ತಿತ್ವದಲ್ಲಿರುವ ದರ ರೂ.6.55) ಮತ್ತು 1000 ಯೂನಿಟ್ ಗಳಿಗಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್ ಗೆ ರೂ.6.95 (ಅಸ್ತಿತ್ವದಲ್ಲಿರುವ ದರ ರೂ.6.85) ಆಗಿರುತ್ತದೆ.

**ಇತರೆ ಎಸ್ಕಾಂಗಳ ವ್ಯಾಪ್ತಿಯ ಪುರಸಭೆ ಪ್ರದೇಶಗಳಲ್ಲಿನ ಎಲ್.ಟಿ ಕೈಗಾರಿಕಾ ಬಳಕೆದಾರರಿಗೆ** ಅನ್ವಯವಾಗುವ ಹೊಸ ದರಗಳು ಮಾಸಿಕ ಬಳಕೆಯ ಮೊದಲ 500 ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.5.80 (ಅಸ್ತಿತ್ವದಲ್ಲಿರುವ ದರ ರೂ.5.70), 501 ರಿಂದ 1000 ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.6.80 (ಅಸ್ತಿತ್ವದಲ್ಲಿರುವ ದರ ರೂ.6.70) ಮತ್ತು 1000 ಯೂನಿಟ್ ಗಳಿಗಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್ ಗೆ ರೂ.7.10 (ಅಸ್ತಿತ್ವದಲ್ಲಿರುವ ದರ ರೂ.7.00) ಆಗಿರುತ್ತದೆ.

**ಎಲ್ಲಾ ಎಸ್ಕಾಂಗಳ ಇತರೆ ಎಲ್ಲಾ ಪ್ರದೇಶಗಳಲ್ಲಿನ ಎಲ್.ಟಿ ಕೈಗಾರಿಕಾ ಬಳಕೆದಾರರಿಗೆ** ಹೊಸ ದರಗಳು, ಮಾಸಿಕ ಬಳಕೆಯ ಮೊದಲ 500 ಯುನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.5.70 (ಅಸ್ತಿತ್ವದಲ್ಲಿರುವ ದರ ರೂ.5.60), 501 ರಿಂದ 1000 ಯೂನಿಟ್ ಗಳ ವರೆಗೆ ಪ್ರತಿ ಯೂನಿಟ್ ಗೆ ರೂ.6.65 (ಅಸ್ತಿತ್ವದಲ್ಲಿರುವ ದರ ರೂ.6.55) ಮತ್ತು 1000 ಯೂನಿಟ್ ಗಳಿಗಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್ ಗೆ ರೂ.6.95 (ಅಸ್ತಿತ್ವದಲ್ಲಿರುವ ದರ ರೂ.6.85) ಆಗಿರುತ್ತದೆ.

ರಾಜ್ಯದಾದ್ಯಂತ **ಎಚ್ ಟಿ ಕೈಗಾರಿಕಾ ಬಳಕೆದಾರರಿಗೆ**, ಅನ್ವಯವಾಗುವ ವಿದ್ಯುಚ್ಛಕ್ತಿ ದರದ ಹೆಚ್ಚಳವು ಪ್ರತಿ ಯೂನಿಟ್ ಗೆ 10 ಪೈಸೆಯಾಗಿದೆ. **ಬಿಬಿಎಂಪಿ ಮತ್ತು ಬೆಸ್ಕಾಂನ ಇತರ ಪುರಸಭೆ ಪ್ರದೇಶಗಳಲ್ಲಿನ ಎಚ್ ಟಿ ಕೈಗಾರಿಕಾ ಬಳಕೆದಾರರಿಗೆ**, ಹೊಸ ದರವು ಮಾಸಿಕ ಬಳಕೆಯ ಮೊದಲ ಒಂದು ಲಕ್ಷ ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.7.45 (ಅಸ್ತಿತ್ವದಲ್ಲಿರುವ ದರ ರೂ.7.35) ಮತ್ತು ಒಂದು ಲಕ್ಷ ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.7.75 (ಅಸ್ತಿತ್ವದಲ್ಲಿರುವ ದರ ರೂ.7.65) ಆಗಿರುತ್ತದೆ.

**ಬೆಸ್ಕಾಂ ವ್ಯಾಪ್ತಿಯ ಇತರ ಎಲ್ಲಾ ಪ್ರದೇಶಗಳಲ್ಲಿನ ಎಚ್ ಟಿ ಕೈಗಾರಿಕಾ ಬಳಕೆದಾರರಿಗೆ** ಅನ್ವಯವಾಗುವ ಹೊಸ ದರವು ಮಾಸಿಕ ಬಳಕೆಯ ಮೊದಲ ಒಂದು ಲಕ್ಷ ಯೂನಿಟ್‌ಗಳಿಗೆ ಪ್ರತಿ ಯೂನಿಟ್ ಗೆ ರೂ.7.35 (ಅಸ್ತಿತ್ವದಲ್ಲಿರುವ ದರ ರೂ.7.25) ಮತ್ತು ಒಂದು ಲಕ್ಷ ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.7.55 (ಅಸ್ತಿತ್ವದಲ್ಲಿರುವ ದರ ರೂ.7.45) ಆಗಿರುತ್ತದೆ.

**ಇತರೆ ಎಸ್ಕಾಂ ಗಳ ಎಲ್ಲಾ ಪ್ರದೇಶಗಳಲ್ಲಿನ ಎಚ್ ಟಿ ಕೈಗಾರಿಕಾ ಬಳಕೆದಾರರಿಗೆ** ಅನ್ವಯವಾಗುವ ಹೊಸ ದರವು ಮಾಸಿಕ ಬಳಕೆಯ ಮೊದಲ ಒಂದು ಲಕ್ಷ ಯೂನಿಟ್‌ಗಳಿಗೆ ಪ್ರತಿ ಯೂನಿಟ್ ಗೆ ರೂ.7.30 (ಅಸ್ತಿತ್ವದಲ್ಲಿರುವ ದರ ರೂ.7.20) ಮತ್ತು ಒಂದು ಲಕ್ಷ ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.7.55 (ಅಸ್ತಿತ್ವದಲ್ಲಿರುವ ದರ ರೂ.7.45) ಆಗಿರುತ್ತದೆ.

- **ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:**

**ಎಲ್.ಟಿ ವಾಣಿಜ್ಯ** ಪ್ರವರ್ಗದ ಬಳಕೆದಾರರಿಗೆ ರಾಜ್ಯಾದ್ಯಂತ ದರ ಏರಿಕೆ ಪ್ರತಿ ಯೂನಿಟ್‌ಗೆ 10 ಪೈಸೆಯಾಗಿದೆ. **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರೆ ಪುರಸಭೆ ಪ್ರದೇಶಗಳನ್ನು ಒಳಗೊಂಡಂತೆ ಎಲ್ಲಾ ಎಸ್ಕಾಂಗಳಲ್ಲಿನ ನಗರ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಲ್ಲಿನ** ಹೊಸ ದರ ಮಾಸಿಕ ಬಳಕೆಯ ಮೊದಲ 50 ಯೂನಿಟ್‌ಗಳಿಗೆ ಪ್ರತಿ ಯೂನಿಟ್ ಗೆ ರೂ.8.35 (ಅಸ್ತಿತ್ವದಲ್ಲಿರುವ ದರ ರೂ .8.25) ಮತ್ತು 50 ಯೂನಿಟ್‌ಗಳನ್ನು ಮೀರಿದ ಬಳಕೆಗಾಗಿ ಪ್ರತಿ ಯೂನಿಟ್‌ಗೆ ರೂ.9.35 (ಅಸ್ತಿತ್ವದಲ್ಲಿರುವ ರೂ.9.25 ದರ) ಆಗಿರುತ್ತದೆ. **ಗ್ರಾಮೀಣ ಪ್ರದೇಶಗಳಲ್ಲಿ**, ಹೊಸ ದರಗಳು ಮಾಸಿಕ ಬಳಕೆಯ ಮೊದಲ 50 ಯೂನಿಟ್‌ಗಳಿಗೆ ಪ್ರತಿ ಯೂನಿಟ್ ಗೆ ರೂ.7.85 (ಅಸ್ತಿತ್ವದಲ್ಲಿರುವ ದರ ರೂ.7.75) ಮತ್ತು 50 ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.8.85 (ಅಸ್ತಿತ್ವದಲ್ಲಿರುವ ದರ ರೂ.8.75) ಆಗಿರುತ್ತದೆ.

**ಬೆಸ್ಕಾಂ ಪ್ರದೇಶದ ಎಚ್ ಟಿ ವಾಣಿಜ್ಯ ಬಳಕೆದಾರರಿಗೆ**, ವಿದ್ಯುಚ್ಛಕ್ತಿ ಬಳಕೆಯ ದರದ ಹೆಚ್ಚಳವು ಪ್ರತಿ ಯೂನಿಟ್ ಗೆ 10 ಪೈಸೆಯಾಗಿದೆ. ಬೆಸ್ಕಾಂನ ವ್ಯಾಪ್ತಿಯ ಬಿಬಿಎಂಪಿ, ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ ಹೊಸ ದರವು ಮಾಸಿಕ ಬಳಕೆಯ ಮೊದಲ ಎರಡು ಲಕ್ಷ ಯೂನಿಟ್‌ಗಳಿಗೆ ಪ್ರತಿ ಯೂನಿಟ್ ಗೆ ರೂ.9.25 (ಅಸ್ತಿತ್ವದಲ್ಲಿರುವ ದರ ರೂ.9.15) ಮತ್ತು ಎರಡು ಲಕ್ಷ ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.9.35 (ಅಸ್ತಿತ್ವದಲ್ಲಿರುವ ದರ ರೂ.9.25) ಆಗಿರುತ್ತದೆ.

**ಬೆಸ್ಕಾಂ ವ್ಯಾಪ್ತಿಯ ಇತರ ಎಲ್ಲಾ ಪ್ರದೇಶಗಳಲ್ಲಿ ಎಚ್ ಟಿ ವಾಣಿಜ್ಯ ಬಳಕೆದಾರರಿಗೆ** ಅನ್ವಯವಾಗುವ ವಿದ್ಯುಚ್ಛಕ್ತಿ ಬಳಕೆ ದರದ ಹೆಚ್ಚಳವು ಪ್ರತಿ ಯೂನಿಟ್ ಗೆ 10 ಪೈಸೆಯಾಗಿದೆ. ಹೊಸ ದರವು ಮಾಸಿಕ ಬಳಕೆಯ ಮೊದಲ ಎರಡು ಲಕ್ಷ ಯೂನಿಟ್‌ಗಳಿಗೆ ಪ್ರತಿ ಯೂನಿಟ್ ಗೆ ರೂ.9.05 (ಅಸ್ತಿತ್ವದಲ್ಲಿರುವ ದರ ಪ್ರತಿ ಯೂನಿಟ್ ಗೆ ರೂ.8.95) ಮತ್ತು ಎರಡು ಲಕ್ಷ ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.9.15 (ಅಸ್ತಿತ್ವದಲ್ಲಿರುವ ದರ ರೂ.9.05) ಆಗಿರುತ್ತದೆ.

**ಇತರೆ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿನ ಎಚ್ ಟಿ ವಾಣಿಜ್ಯ ಬಳಕೆದಾರರಿಗೆ** ಅನ್ವಯವಾಗುವ ವಿದ್ಯುಚ್ಛಕ್ತಿ ದರದ ಹೆಚ್ಚಳವು ಪ್ರತಿ ಯೂನಿಟ್ ಗೆ 10

ಪೈಸೆಯಾಗಿದೆ. ಹೊಸ ದರವು ಮಾಸಿಕ ಬಳಕೆಯ ಮೊದಲ ಎರಡು ಲಕ್ಷ ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.9.00 (ಅಸ್ತಿತ್ವದಲ್ಲಿರುವ ದರ ಪ್ರತಿ ಯೂನಿಟ್ ಗೆ ರೂ.8.90) ಮತ್ತು ಎರಡು ಲಕ್ಷ ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.9.10 (ಅಸ್ತಿತ್ವದಲ್ಲಿರುವ ದರ ಪ್ರತಿ ಯೂನಿಟ್ ಗೆ ರೂ.9.00) ಆಗಿರುತ್ತದೆ.

- **ಕುಡಿಯುವ ನೀರು ಸರಬರಾಜು ಮತ್ತು ಬೀದಿ ದೀಪ:**
ಆಯೋಗವು ಕುಡಿಯುವ ನೀರು ಸರಬರಾಜು ಎಲ್ ಟಿ ಸ್ಥಾವರಗಳ ವಿದ್ಯುಚ್ಛಕ್ತಿ ಬಳಕೆ ದರವನ್ನು ಈಗಿರುವ ಪ್ರತಿ ಯೂನಿಟ್ ಗೆ ರೂ.4.85 ರಿಂದ ಪ್ರತಿ ಯೂನಿಟ್ ಗೆ ರೂ.4.95 ಪ್ರತಿ ಕ್ಕೆ ನಿಗದಿಪಡಿಸಿ ಪ್ರತಿ ಯೂನಿಟ್ ಗೆ 10 ಪೈಸೆಗಳಷ್ಟು ಮಾತ್ರ ಹೆಚ್ಚಿಸಿದೆ. ಎಚ್ ಟಿ ಕುಡಿಯುವ ನೀರು ಸರಬರಾಜು ಸ್ಥಾವರಗಳಿಗೆ ಕೂಡ ಪ್ರತಿ ಯೂನಿಟ್ ಗೆ ಈಗಿರುವ ದರವನ್ನು ರೂ.5.45 ರಿಂದ ಪ್ರತಿ ಯೂನಿಟ್ ಗೆ ರೂ.5.55 ಕ್ಕೆ ನಿಗದಿಪಡಿಸಿ, ಪ್ರತಿ ಯೂನಿಟ್ ಗೆ 10 ಪೈಸೆ ಹೆಚ್ಚಿಸಲಾಗಿರುತ್ತದೆ.

- **ಎಲ್ ಇಡಿ / ಇಂಡಕ್ಷನ್ ಲ್ಯಾಂಪ್ ಗಳನ್ನು ಅಳವಡಿಸಿರುವ ಬೀದಿ ದೀಪ ಸ್ಥಾವರಗಳಿಗೆ ರಿಯಾಯಿತಿ ದರ:**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಬೀದಿದೀಪಗಳಿಗೆ ಎಲ್ಇಡಿ / ಇಂಡಕ್ಷನ್ ಲ್ಯಾಂಪ್ ಅಳವಡಿಸಿದ್ದಲ್ಲಿ ನೀಡಲಾಗುವ ವಿದ್ಯುಚ್ಛಕ್ತಿ ಬಳಕೆ ದರದಲ್ಲಿನ 105 ಪೈಸೆ ರಿಯಾಯಿತಿ ಅವಕಾಶ ನೀಡುವುದನ್ನು ಆಯೋಗವು ಮುಂದುವರಿಸಿದೆ. ಬೆಸ್ಕಾಂ ಪ್ರದೇಶದಲ್ಲಿ ಪ್ರತಿ ಯೂನಿಟ್ ಗೆ ರೂ.5.50 ರಿಂದ ಪ್ರತಿ ಯೂನಿಟ್ ಗೆ ರೂ.5.60 ಮತ್ತು ಇತರ ಎಸ್ಕಾಂ ನ ಪ್ರದೇಶದಲ್ಲಿ ಪ್ರತಿ ಯೂನಿಟ್ ಗೆ ರೂ.5.45 ರಿಂದ ರೂ.5.55 ಕ್ಕೆ ಪ್ರೋತ್ಸಾಹಕ ದರವನ್ನು ಪರಿಷ್ಕರಿಸಲಾಗಿದೆ.
ಎಲ್ ಇಡಿ ದೀಪಗಳನ್ನು ಬಳಸದ ಸ್ಥಾವರಗಳಿಗೆ, ಬೆಸ್ಕಾಂ ಪ್ರದೇಶದಲ್ಲಿ ರೂ.6.65 (ಅಸ್ತಿತ್ವದಲ್ಲಿರುವ ದರ ಪ್ರತಿ ಯೂನಿಟ್ ಗೆ ರೂ.6.55) ಮತ್ತು ಇತರ ವಿದ್ಯುತ್ ಸರಬರಾಜು ಕಂಪನಿಗಳ ಪ್ರದೇಶದಲ್ಲಿ ರೂ.6.60 (ಅಸ್ತಿತ್ವದಲ್ಲಿರುವ ದರ ಪ್ರತಿ ಯೂನಿಟ್ ಗೆ ರೂ.6.50) ಗೆ ಪರಿಷ್ಕರಿಸಿ ನಿಗದಿಪಡಿಸಿರುತ್ತದೆ.
- **ಶಿಕ್ಷಣ ಸಂಸ್ಥೆಗಳು ಮತ್ತು ಆಸ್ಪತ್ರೆಗಳು:**
**ಎಲ್ ಟಿ ಪ್ರವರ್ಗದ** ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಖಾಸಗಿ ಆಸ್ಪತ್ರೆಗಳಿಗೆ ವಿದ್ಯುಚ್ಛಕ್ತಿ ಬಳಕೆ ದರವನ್ನು ಆಯೋಗವು ರಾಜ್ಯದಾದ್ಯಂತ ಪ್ರತಿ ಯೂನಿಟ್ ಗೆ 10 ಪೈಸೆ ಗಳಷ್ಟು ಹೆಚ್ಚಿಸಿದೆ. **ಬೆಸ್ಕಾಂ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪುರಸಭೆ ಮತ್ತು ನಗರ ಸ್ಥಳೀಯ ಸಂಸ್ಥೆ ಪ್ರದೇಶಗಳಲ್ಲಿ** ಎಲ್ ಟಿ ಪ್ರವರ್ಗದಡಿ ದರವನ್ನು ಪರಿಷ್ಕೃತಗೊಳಿಸಿ ಮಾಸಿಕ ಬಳಕೆಯ ಮೊದಲ 200 ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.7.30 (ಅಸ್ತಿತ್ವದಲ್ಲಿರುವ ದರ ರೂ.7.20) ಮತ್ತು 200 ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.8.55 (ಅಸ್ತಿತ್ವದಲ್ಲಿರುವ ದರ ರೂ.8.45) ಕ್ಕೆ ನಿಗದಿಪಡಿಸಲಾಗಿದೆ. **ಇತರ ಪ್ರದೇಶಗಳಲ್ಲಿ**, ಪರಿಷ್ಕೃತ ವಿದ್ಯುಚ್ಛಕ್ತಿ ದರವು ಮಾಸಿಕ ಬಳಕೆಯ ಮೊದಲ 200 ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.6.75 (ಅಸ್ತಿತ್ವದಲ್ಲಿರುವ

ದರ ರೂ.6.65) ಮತ್ತು 200 ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.8.00 (ಅಸ್ತಿತ್ವದಲ್ಲಿರುವ ದರ ರೂ.7.90) ಆಗಿರುತ್ತದೆ.

**ಇತರೆ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ಪುರಸಭೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಲ್ಲಿನ** ಎಲ್ ಟಿ ಪ್ರವರ್ಗದ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪರಿಷ್ಕೃತ ವಿದ್ಯುಚ್ಛಕ್ತಿ ಬಳಕೆ ದರವನ್ನು ಮೊದಲ 200 ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.7.25 (ಅಸ್ತಿತ್ವದಲ್ಲಿರುವ ದರ ರೂ.7.15) ಮತ್ತು 200 ಯೂನಿಟ್ ಗೆ ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.8.50 (ಅಸ್ತಿತ್ವದಲ್ಲಿರುವ ದರ ರೂ.8.40) ನಿಗದಿಪಡಿಸಲಾಗಿದೆ. ಇತರೆ ಎಲ್ಲಾ ಪ್ರದೇಶಗಳಲ್ಲಿ, ಪರಿಷ್ಕೃತ ದರವು ಮಾಸಿಕ ಬಳಕೆಯ ಮೊದಲ 200 ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.6.70 (ಅಸ್ತಿತ್ವದಲ್ಲಿರುವ ದರ ರೂ.6.60) ಮತ್ತು 200 ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.7.95 (ಅಸ್ತಿತ್ವದಲ್ಲಿರುವ ದರ ರೂ.7.85) ಕ್ಕೆ ನಿಗದಿಪಡಿಸಲಾಗಿದೆ.

**ಬೆಸ್ಕಾಂ ವ್ಯಾಪ್ತಿಯಲ್ಲಿ, ಹೆಚ್ ಟಿ ಪ್ರವರ್ಗದಲ್ಲಿ** ವಿದ್ಯುಚ್ಛಕ್ತಿ ಪಡೆಯುವ ಸರ್ಕಾರಿ ಆಸ್ಪತ್ರೆಗಳು ಮತ್ತು ಧರ್ಮಾರ್ಥ ಸಂಸ್ಥೆಗಳು ನಡೆಸುವ ಆಸ್ಪತ್ರೆಗಳು ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳು ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ಮಾಸಿಕ ಬಳಕೆಯ ಮೊದಲ ಒಂದು ಲಕ್ಷ ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.7.20 (ಅಸ್ತಿತ್ವದಲ್ಲಿರುವ ದರ ರೂ.7.10) ಮತ್ತು ಒಂದು ಲಕ್ಷ ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.7.60 (ಅಸ್ತಿತ್ವದಲ್ಲಿರುವ ದರ ರೂ.7.50) ಗಳಿಗೆ ಪರಿಷ್ಕೃತ ಗೊಳಿಸಲಾಗಿದೆ. **ಇತರೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಪ್ರದೇಶಗಳಲ್ಲಿ**, ಪರಿಷ್ಕೃತ ದರವು ಮಾಸಿಕ ಬಳಕೆಯ ಮೊದಲ ಒಂದು ಲಕ್ಷ ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.7.15 (ಅಸ್ತಿತ್ವದಲ್ಲಿರುವ ದರ ರೂ.7.05) ಮತ್ತು ಒಂದು ಲಕ್ಷ ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.7.55 (ಅಸ್ತಿತ್ವದಲ್ಲಿರುವ ದರ ರೂ.7.45) ಆಗಿರುತ್ತದೆ.

**ಹೆಚ್ ಟಿ ಪ್ರವರ್ಗದಡಿ** ವಿದ್ಯುಚ್ಛಕ್ತಿ ಪಡೆಯುವ **ಬೆಸ್ಕಾಂ ಪ್ರದೇಶದಲ್ಲಿರುವ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಖಾಸಗಿ ಆಸ್ಪತ್ರೆಗಳಿಗೆ** ಪರಿಷ್ಕೃತ ದರವು ಮೊದಲ ಒಂದು ಲಕ್ಷ ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.8.20 (ಅಸ್ತಿತ್ವದಲ್ಲಿರುವ ದರ ರೂ.8.10) ಮತ್ತು ಒಂದು ಲಕ್ಷ ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.8.60 (ಅಸ್ತಿತ್ವದಲ್ಲಿರುವ ದರ ರೂ.8.50) ಆಗಿರುತ್ತದೆ. **ಇತರೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಪ್ರದೇಶಗಳಲ್ಲಿ**, ಪರಿಷ್ಕೃತ ದರವು ಮೊದಲ ಒಂದು ಲಕ್ಷ ಯೂನಿಟ್ ಗಳಿಗೆ ಪ್ರತಿ ಯೂನಿಟ್ ಗೆ ರೂ.8.15 (ಅಸ್ತಿತ್ವದಲ್ಲಿರುವ ದರ ರೂ.8.05) ಮತ್ತು ಒಂದು ಲಕ್ಷ ಯೂನಿಟ್ ಗಳನ್ನು ಮೀರಿದ ಬಳಕೆಗೆ ಪ್ರತಿ ಯೂನಿಟ್ ಗೆ ರೂ.8.55 (ಅಸ್ತಿತ್ವದಲ್ಲಿರುವ ದರ ರೂ.8.45) ಆಗಿರುತ್ತದೆ.

- **ಹಸಿರು ದರ (Green Tariff):**

ನವೀಕರಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸುವ ವಿದ್ಯುಚ್ಛಕ್ತಿಯ ಖರೀದಿ ಮತ್ತು ಉಪಯೋಗವನ್ನು ಪ್ರೋತ್ಸಾಹಿಸಲು, ಹೆಚ್ ಟಿ ಕೈಗಾರಿಕೆ ಮತ್ತು ಹೆಚ್ ಟಿ ವಾಣಿಜ್ಯ ಗ್ರಾಹಕರಿಗೆ,

ಅವರು ಇಚ್ಚಿಸಿದಲ್ಲಿ, ಅವರಿಗೆ ಅನ್ವಯವಾಗುವ ದರಕ್ಕಿಂತ ಪ್ರತಿ ಯೂನಿಟ್‌ಗೆ 50 ಪೈಸೆಯಷ್ಟು ಹೆಚ್ಚಿನ ಹಸಿರು ದರವನ್ನು ಮುಂದುವರೆಸಿದೆ.

- **ಸರ್ಕಾರದ ಸಹಾಯ ಧನ:**

10 ಎಚ್‌ಪಿ ವರೆಗಿನ ಸಾಮರ್ಥ್ಯದ 30.65 ಲಕ್ಷ ನೀರಾವರಿ ಪಂಪ್ ಸೆಟ್‌ಗಳಿಗೆ ಹಾಗೂ 26.88 ಲಕ್ಷ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸಂಪರ್ಕಗಳಿಗೆ ಉಚಿತ ವಿದ್ಯುತ್ ಸರಬರಾಜು ಮಾಡಲು ವಿದ್ಯುತ್ ಸರಬರಾಜು ಕಂಪನಿಗಳು ಮತ್ತು HRECS ಗೆ ಸರ್ಕಾರವು 2020-21 ನೇ ಸಾಲಿಗೆ ಕೊಡಬೇಕಾದ ಸಹಾಯಧನ ಮೊತ್ತವಾದ ರೂ.12,911.38 ಕೋಟಿ ಗಳಿಗೆ ಪ್ರತಿಯಾಗಿ 2021-22 ನೇ ಸಾಲಿನಲ್ಲಿ ಕೊಡಬೇಕಾದ ಅಂದಾಜು ಮೊತ್ತ ರೂ.13,071.73 ಕೋಟಿಗಳು. ಆರ್ಥಿಕ ವರ್ಷ 2022 ರಲ್ಲಿ ನೀರಾವರಿ ಪಂಪ್‌ಸೆಟ್‌ಗಳ ಅಂದಾಜು ವಿದ್ಯುಚ್ಛಕ್ತಿ ಬಳಕೆ 21,551.50 ದಶಲಕ್ಷ ಯೂನಿಟ್ ಗಳು (ಒಟ್ಟು ಮಾರಾಟದ ಶೇ 37.38) ಮತ್ತು ಆರ್ಥಿಕ ವರ್ಷ 2022 ರಲ್ಲಿ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಗ್ರಾಹಕರ ಅಂದಾಜು ಬಳಕೆ 745.91 ದಶಲಕ್ಷ ಯೂನಿಟ್ ಗಳು (ಸಹಾಯಧನಕ್ಕೆ ಸಂಬಂಧಿಸಿದಂತೆ ಒಟ್ಟು ವಿದ್ಯತ್ ಬಳಕೆ 22,297.41 ದಶಲಕ್ಷ ಯೂನಿಟ್ ಗಳು).

- **ವಿದ್ಯುತ್ ಸರಬರಾಜು ಕಂಪನಿಗಳ 2021-22 ನೇ ಸಾಲಿನ ವಾರ್ಷಿಕ ಕಂದಾಯ ಬೇಡಿಕೆ (ARR):**

ಆಯೋಗವು, ಬಹು ವಾರ್ಷಿಕ ದರ ವಿನಿಯಾಮವಳಿಗಳ ತತ್ವಗಳನ್ನು ಆಧರಿಸಿ, ಆರ್ಥಿಕ ವರ್ಷ 2022 ಕ್ಕೆ, ವಾರ್ಷಿಕ ಕಂದಾಯ ಬೇಡಿಕೆಯನ್ನು ಪರಿಷ್ಕರಿಸಿ, ನಿಗದಿಪಡಿಸಿರುತ್ತದೆ. ಆಯೋಗವು ಎಲ್ಲಾ ವಿದ್ಯುತ್ ವಿತರಣಾ ಪರವಾನಿಗೆದಾರರ ಆರ್ಥಿಕ ವರ್ಷ 2020 ರ ವಾರ್ಷಿಕ ಕಾರ್ಯ ನಿರ್ವಹಣೆ ಪುನರ್ಮನನ ಮಾಡಿದ್ದು, ಕೊರತೆಯನ್ನು, ಆರ್ಥಿಕ ವರ್ಷ 2022 ರ ವಾರ್ಷಿಕ ಬೇಡಿಕೆಗೆ ಪರಿಗಣಿಸಿರುತ್ತದೆ.

ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ದರ ಪರಿಶೀಲನೆಗಾಗಿ ಸಲ್ಲಿಸಿದ್ದ ಅರ್ಜಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ ನಂತರ ಆಯೋಗವು, 2021-22 ನೇ ಸಾಲಿನಲ್ಲಿ 60,645.95 ದಶಲಕ್ಷ ಯೂನಿಟ್‌ಗಳಷ್ಟು (ಆ.ವ. 2022 ರ ಸಾಲಿನಲ್ಲಿ, ಶೇ 2.978 ರಷ್ಟು ವಿದ್ಯುತ್ ಪ್ರಸರಣಾ ನಷ್ಟ ಮತ್ತು ಶೇ 11.29 ರಷ್ಟು ವಿದ್ಯುತ್ ವಿತರಣಾ ನಷ್ಟ ಹೊರತುಪಡಿಸಿದಂತೆ) ವಿದ್ಯುತ್ ಮಾರಾಟ ಮಾಡಲಿರುವ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ, ಒಟ್ಟು ರೂ. 49,218.18 ಕೋಟಿಗಳ, ಒಟ್ಟಾರೆ ಖರ್ಚು (ವಾರ್ಷಿಕ ಕಂದಾಯ ಬೇಡಿಕೆ) ಅನ್ನು ಅನುಮೋದಿಸಿದೆ. ಈ ಉದ್ದೇಶಕ್ಕಾಗಿ ವಿದ್ಯುತ್ ಸರಬರಾಜು ಕಂಪನಿಗಳು ಆ.ವ 2022 ರ ಅವಧಿಯಲ್ಲಿ 70,852.521 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿಯನ್ನು ಖರೀದಿ ಮಾಡಲಿವೆ. ಆ.ವ 2021-22 ರಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ (ಬೆಸ್ಕಾಂ) ವಾರ್ಷಿಕ ಕಂದಾಯ ಬೇಡಿಕೆಯು ರೂ.24,058.47 ಕೋಟಿಗಳಾಗಿದ್ದು, ರಾಜ್ಯದ ಒಟ್ಟು ವಿದ್ಯುಚ್ಛಕ್ತಿ ಖರೀದಿಯ ಶೇ.46.69 ರಷ್ಟು ಪ್ರಮಾಣದ 33,081.307 ದಶಲಕ್ಷ ಯುನಿಟ್ ಗಳ ವಿದ್ಯುತ್‌ನ್ನು ಖರೀದಿಸಲಿದೆ.

ಆರ್ಥಿಕ ವರ್ಷ 2022 ಕ್ಕೆ ಆಯೋಗವು ಅನುಮೋದಿಸಿದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಪರಿಷ್ಕೃತ ವಾರ್ಷಿಕ ಕಂದಾಯ ಬೇಡಿಕೆ (ARR), ವಿದ್ಯುತ್ ಮಾರಾಟ ಪ್ರಮಾಣ, ವಿದ್ಯುತ್ ಖರೀದಿ ಪ್ರಮಾಣಗಳ ಸರಾಂಶವು ಕೆಳಕಂಡಂತೆ ಇರುತ್ತದೆ:

| ಕ್ರ. ಸಂ. | ವಿಷಯ | FY22 | Remarks |
|---|---|---|---|
| 1 | ಆಯೋಗವು ಅನುಮೋದಿಸಿದ ವಾರ್ಷಿಕ ಕಂದಾಯ ಬೇಡಿಕೆ (ARR), ಕೋಟಿ ರೂ. ಗಳಲ್ಲಿ (ಎಲ್ಲಾ ವಿ.ಸ.ಕಂ ಗಳಿಗೆ) | 49,218.18 | |
| 2 | ಆಯೋಗವು ಅನುಮೋದಿಸಿದ ವಾರ್ಷಿಕ ಕಂದಾಯ ಬೇಡಿಕೆ (ARR), ಕೋಟಿ ರೂ. ಗಳಲ್ಲಿ (HRECs ಗೆ) | 171.49 | |
| 3 | ಅನುಮೋದಿಸಿದ ವಿದ್ಯುತ್ ಮಾರಾಟ ಪ್ರಮಾಣ, ದಶ ಲಕ್ಷ ಯೂನಿಟ್‌ಗಳಲ್ಲಿ (ಎಲ್ಲಾ ವಿ.ಸ.ಕಂ ಗಳಿಗೆ) | 60,645.95 | ಅನುಮೋದಿಸಿದ ಪ್ರಸರಣಾ ಹಾಗೂ ವಿತರಣಾ ನಷ್ಟವನ್ನು ಹೊರತುಪಡಿಸಿ. |
| 4 | ಅನುಮೋದಿಸಿದ ವಿದ್ಯುತ್ ಮಾರಾಟ ಪ್ರಮಾಣ, ದಶ ಲಕ್ಷ ಯೂನಿಟ್‌ಗಳಲ್ಲಿ (HRECs ಗೆ) | 273.98 | ಅನುಮೋದಿಸಿದ ಪ್ರಸರಣಾ ಹಾಗೂ ವಿತರಣಾ ನಷ್ಟವನ್ನು ಹೊರತುಪಡಿಸಿ. |
| 5 | ಅನುಮೋದಿಸಿದ ಶೇ. ಪ್ರಸರಣಾ ನಷ್ಟ | 2.978 | |
| 6 | ಅನುಮೋದಿಸಿದ ಶೇ. ವಿತರಣಾ ನಷ್ಟ | 11.29 | |
| 7 | ಅನುಮೋದಿಸಿದ ವಿದ್ಯುತ್ ಖರೀದಿ ಪ್ರಮಾಣ, ದಶ ಲಕ್ಷ ಯೂನಿಟ್ ಗಳಲ್ಲಿ | 70,852.52 | FY21 – 73,104.34 ದಶ ಲಕ್ಷ ಯೂನಿಟ್ |

ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘವು, ವಿದ್ಯುತ್ ಖರೀದಿಯ ವೆಚ್ಚದಲ್ಲಿ ಒಟ್ಟಾರೆ ಏರಿಕೆ ಮತ್ತು ಕಾರ್ಯಾಚರಣೆಗಳ ವೆಚ್ಚದಲ್ಲಿ ಏರಿಕೆ ಉಲ್ಲೇಖಿಸಿ, ಆರ್ಥಿಕ ವರ್ಷ 2020 ರ ವಾರ್ಷಿಕ ಕಾರ್ಯ ನಿರ್ವಹಣೆ ಪುನರ್ಮನನ ಮತ್ತು 2021-22 ನೇ ಸಾಲಿಗೆ ಪರಿಷ್ಕೃತ ವಿದ್ಯುತ್ ದರಗಳ ಪ್ರಸ್ತಾವನೆಗಳೊಂದಿಗೆ, ಆರ್ಥಿಕ ವರ್ಷ 2021-22 ರ ವಾರ್ಷಿಕ ಕಂದಾಯ ಬೇಡಿಕೆಯ ಪರಿಷ್ಕರಣೆ ಕೋರಿ ಆಯೋಗದ ಮುಂದೆ ಅರ್ಜಿಗಳನ್ನು ಸಲ್ಲಿಸಿದ್ದವು. 2021-22 ನೇ ಸಾಲಿಗೆ ಪ್ರಸ್ತಾವಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ (ARR) (ಆರ್ಥಿಕ ವರ್ಷ 2020 ರ ಮುಂದೊಯ್ದ ಕೊರತೆಯನ್ನು ಸೇರಿದಂತೆ), ಈ ಕೆಳಕಂಡಂತೆ ಇವೆ:

**2021-22 ನೇ ಸಾಲಿನ, ವಿದ್ಯುತ್ ಸರಬರಾಜು ಕಂಪನಿವಾರು, ಪ್ರಸ್ತಾವಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ:**

**(ರೂ. ಕೋಟಿಗಳಲ್ಲಿ)**

| ವಿದ್ಯುತ್ ಸರಬರಾಜು ಪರವಾನಿಗೆದಾರ | FY22 | |
|---|---|---|
| | ಸಲ್ಲಿಸಿದಂತೆ | ಅನುಮೋದಿಸಿದಂತೆ |
| **ಬೆ.ವಿ.ಸ.ಕಂ** | 24,462.37 | 24,058.47 |
| **ಮ.ವಿ.ಸ.ಕಂ** | 5,119.61 | 4,507.65 |
| **ಚಾ.ವಿ.ಸ.ನಿ.ನಿ** | 6,024.13 | 5,180.69 |
| **ಹು.ವಿ.ಸ.ಕಂ** | 9,890.72 | 9,519.60 |
| **ಗು.ವಿ.ಸ.ಕಂ** | 7,129.59 | 5,951.77 |
| **ಹುಕ್ಕೇರಿ ಆರ್.ಇ.ಸಿ.ಎಸ್.** | 230.83 | 171.49 |
| **ಒಟ್ಟು** | **52,857.25** | **49,389.67** |

- **ಆರ್ಥಿಕ ವರ್ಷ 2022 ರ ಕಂದಾಯ ಕೊರತೆ:**

  ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಮತ್ತು ಹುಕ್ಕೇರಿ ಆರ್.ಇ.ಸಿ.ಎಸ್ ನ ಆರ್ಥಿಕ ವರ್ಷ 2020 ರ ವಾರ್ಷಿಕ ಕಾರ್ಯ ನಿರ್ವಹಣಾ ಪುನರ್ಮನನದಲ್ಲಿ ರೂ.1,100.33 ಕೋಟಿ ಕಂದಾಯ ಕೊರತೆಯನ್ನು ಆಯೋಗವು ನಿರ್ಧರಿಸಿದೆ. ಸದರಿ ಕಂದಾಯ ಕೊರತೆಯೊಂದಿಗೆ ಆರ್ಥಿಕ ವರ್ಷ 2022 ಕ್ಕೆ ಅಂದಾಜಿಸಿದ ಕಂದಾಯ ಕೊರತೆ ರೂ.719.05 ಕೋಟಿಗಳನ್ನು ಗಣನೆಗೆ ತೆಗೆದುಕೊಂಡ ನಂತರ ಒಟ್ಟಾರೆ ಕೊರತೆ ರೂ.1,819.38 ಕೋಟಿಗಳಾಗಿದ್ದು, ಇದನ್ನು ಆರ್ಥಿಕ ವರ್ಷ 2022 ರಲ್ಲಿ ದರ ಹೆಚ್ಚಳದಿಂದ ವಸೂಲು ಮಾಡಬೇಕಿರುತ್ತದೆ.

- **2021-22 ನೇ ಸಾಲಿಗೆ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತದ (ಕೆ.ಪಿ.ಟಿ.ಸಿ.ಎಲ್) ವಿದ್ಯುತ್ ಪ್ರಸರಣಾ ದರ:**

  ಆಯೋಗವು ಆರ್ಥಿಕ ವರ್ಷ 2020 ರ ವಾರ್ಷಿಕ ಕಾರ್ಯನಿರ್ವಹಣಾ ಪುನರ್ಮನನದ ಅನುಸಾರ ಮುಂದೊಯ್ದ ರೂ.34.18 ಕೋಟಿ ಕೊರತೆಯನ್ನು ಸೇರಿಸಿಕೊಂಡಂತೆ, ಆರ್ಥಿಕ ವರ್ಷ 2022 ನೇ ಸಾಲಿಗೆ ರೂ.4,276.07 ಕೋಟಿಗಳ ಪರಿಷ್ಕೃತ ವಾರ್ಷಿಕ ಕಂದಾಯ ಬೇಡಿಕೆಯನ್ನು ಅನುಮೋದಿಸಿದೆ.

  ದಿನಾಂಕ 05.10.2020 ರ ಮಾನ್ಯ ವಿದ್ಯುಚ್ಛಕ್ತಿ ನ್ಯಾಯಮಂಡಳಿಯ ಆದೇಶಗಳು ಹಾಗೂ ದಿನಾಂಕ 19.10.2020 ರ ಕೆ.ಇ.ಆರ್.ಸಿ ಆದೇಶದ ಪ್ರಕಾರ ನಿರ್ಧರಿಸಿರುವ ಮೊತ್ತವನ್ನು ಮುಂದಿನ ಐದು ವರ್ಷಗಳ ಅವಧಿಯಲ್ಲಿ ನಿಯಂತ್ರಕ ಸ್ವತ್ತಿನ ಮೂಲದ ವಸೂಲು ಮಾಡಲು ಕ್ರಮ

ತೆಗೆದುಕೊಳ್ಳುವಲ್ಲಿ ಆರ್ಥಿಕ ವರ್ಷ 2021-22 ನೇ ಸಾಲಿನಲ್ಲಿ 331.41 ಕೋಟಿ ರೂಪಾಯಿಗಳನ್ನು ವಾರ್ಷಿಕ ಕಂದಾಯ ಬೇಡಿಕೆಯಲ್ಲಿ ಪರಿಗಣಿಸಲಾಗಿದೆ.

2020-21 ರ ಸಾಲಿಗೆ ಆಯೋಗವು ಅನುಮೋದಿಸಿದ್ದ, ಕ.ವಿ.ಪ್ರ.ನಿ.ನಿ. ಗೆ ಪಾವತಿಸಬೇಕಾದ ಪ್ರಸರಣಾ ದರವಾದ ರೂ.1,55,114 ಪ್ರತಿ ಮೆ.ವ್ಯಾ / ಪ್ರತಿ ತಿಂಗಳಿಗೆ ಹಾಗೂ 2019 ರ ದರ ಆದೇಶದಲ್ಲಿ 2021-22 ನೇ ಸಾಲಿಗೆ ನಿರ್ಧರಿಸಿದ್ದ ರೂ.1,33,758 ಪ್ರತಿ ಮೆ.ವ್ಯಾ / ಪ್ರತಿ ತಿಂಗಳ ಪ್ರತಿಯಾಗಿ, ಪ್ರಸರಣಾ ದರವನ್ನು ಪರಿಷ್ಕರಿಸಿ, ಆರ್ಥಿಕ ವರ್ಷ 2021-22 ಕ್ಕೆ, ಪ್ರತಿ ಮೆ.ವ್ಯಾ / ಪ್ರತಿ ತಿಂಗಳಿಗೆ ರೂ.1,51,518 ಅನ್ನು ನಿಗದಿಪಡಿಸಿದೆ. ಆರ್ಥಿಕ ವರ್ಷ 2021-22 ರ ಈ ಪರಿಷ್ಕೃತ ಪ್ರಸರಣಾ ದರವನ್ನು, ವಿದ್ಯುತ್ ಕಂಪನಿಗಳಿಗೆ ಅನುಮೋದಿಸಿದ ವಿದ್ಯುತ್ ಖರೀದಿ ವೆಚ್ಚದೊಂದಿಗೆ ಸೇರಿಸಿಕೊಂಡು, ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ, ವಿದ್ಯುತ್ ದರ ಪರಿಷ್ಕರಣೆಯನ್ನು ಅನುಮೋದಿಸಿದೆ.

- **ಮಂಗಳೂರು ವಿಶೇಷ ಆರ್ಥಿಕ ವಲಯಕ್ಕೆ (MSEZL) ವಾರ್ಷಿಕ ಕಂದಾಯ ಬೇಡಿಕೆ (ARR) ಮತ್ತು ವಿದ್ಯುಚ್ಛಕ್ತಿ ದರ ನಿರ್ಧರಣೆ:**

  ಆಯೋಗವು, ಆರ್ಥಿಕ ವರ್ಷ 2022 ಕ್ಕೆ ಮಂಗಳೂರು ವಿಶೇಷ ಆರ್ಥಿಕ ವಲಯಕ್ಕೆ (MSEZL) ರೂ.52.792 ಕೋಟಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿರ್ಧರಿಸಿದೆ. ಮಂಗಳೂರು ವಿಶೇಷ ಆರ್ಥಿಕ ವಲಯದ ಕೈಗಾರಿಕಾ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ರೂ.7.30 ರಂತೆ ಪರಿಷ್ಕೃತ ಚಿಲ್ಲರೆ ವಿದ್ಯುತ್ ದರಗಳನ್ನು ನಿಗದಿಪಡಿಸಿದೆ.

- **ಏಕಸ್ ವಿಶೇಷ ಆರ್ಥಿಕ ವಲಯಕ್ಕೆ (AEQUS SEZ) ವಾರ್ಷಿಕ ಕಂದಾಯ ಬೇಡಿಕೆ (ARR) ಮತ್ತು ವಿದ್ಯುಚ್ಛಕ್ತಿ ದರ ನಿರ್ಧರಣೆ:**

  ಆಯೋಗವು, ಆರ್ಥಿಕ ವರ್ಷ 2022 ಕ್ಕೆ ಏಕಸ್ ವಿಶೇಷ ಆರ್ಥಿಕ ವಲಯಕ್ಕೆ (AEQUS SEZ) ರೂ.20.579 ಕೋಟಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿರ್ಧರಿಸಿದೆ. ಏಕಸ್ ವಿಶೇಷ ಆರ್ಥಿಕ ವಲಯದ ಕೈಗಾರಿಕಾ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ರೂ.7.60 ರಂತೆ ಪರಿಷ್ಕೃತ ಚಿಲ್ಲರೆ ವಿದ್ಯುತ್ ದರಗಳನ್ನು ನಿಗದಿಪಡಿಸಿದೆ.

**[*ಟಿಪ್ಪಣಿ: ಪ್ರತಿ ಬಳಕೆದಾರರ ಪ್ರವರ್ಗಕ್ಕೆ ಸಬಂಧಿಸಿದ ಪರಿಷ್ಕೃತ ವಿದ್ಯುತ್‌ದರ ವಿವರಗಳನ್ನು ಲಗತ್ತಿಸಿದೆ ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ, ವಿದ್ಯುತ್ ಸರಬರಾಜು ಕಂಪನಿಗಳು, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಮಂಗಳೂರು ವಿಶೇಷ ಆರ್ಥಿಕ ವಲಯ (MSEZ) ಮತ್ತು ಏಕಸ್ (AEQUS) ವಿಶೇಷ ಆರ್ಥಿಕ ವಲಯ (SEZ) ಗಳಿಗೆ ಸಬಂಧಿಸಿದ ದರ ಪರಿಷ್ಕರಣ ಅದೇಶಗಳ ಸಂಪೂರ್ಣ ವಿವರಗಳನ್ನು ಆಯೋಗದ ವೆಬ್‌ಸೈಟ್ www.karunadu.karnataka.gov.in/kerc ನಲ್ಲಿ ಪ್ರಕಟಿಸಲಾಗಿದೆ.*]**

*******